# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಬುಧವಾರ, ಏಪ್ರಿಲ್ 19, 2023

ಸಂಪುಟ : 49 ಸಂಚಿಕೆ : 337 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




# ಪಿ.ಆರ್.ಟಿ. ಅಧ್ಯಯನ ಪೀಠ ಸ್ಥಾಪನೆಗೆ ಸರ್ಕಾರವನ್ನೇ ಕಾಯುವುದು ಬೇಡ

**ಪಿ. ಆರ್. ತಿಪ್ಪೇಸ್ವಾಮಿ ಕಲಾ ಸಂಭ್ರಮದಲ್ಲಿ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ**

ದಾವಣಗೆರೆ, ಏ. 18- ನಗರದ ವಿಶ್ವ ವಿದ್ಯಾಲಯ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಚಿತ್ರಕಲಾವಿದ ದಿ. ಪಿ.ಆರ್. ತಿಪ್ಪೇಸ್ವಾಮಿ ಅಧ್ಯಯನ ಪೀಠ ಸ್ಥಾಪನೆ ಮಾಡುವ ಉದ್ದೇಶ ಹೊಂದಿದ್ದು, ಇದಕ್ಕಾಗಿ ಸರ್ಕಾರದ ಕಡೆ ಮುಖ ಮಾಡದೇ ಮಹಾವಿದ್ಯಾಲಯ ಮತ್ತು ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನದ ವತಿಯಿಂದಲೇ ಆರಂಭಿಸಿ ನಂತರ ದಾನಿಗಳು, ಸರ್ಕಾರದ ನೆರವು ಪಡೆಯಲು ಮುಂದಾಗುವಂತೆ ಸಾಣೇಹಳ್ಳಿ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಲಹೆ ನೀಡಿದರು.

ನಗರದ ವಿಶ್ವವಿದ್ಯಾಲಯ ದೃಶ್ಯಕಲಾ ಮಹಾವಿದ್ಯಾಲಯದ ಸಭಾಂಗಣದಲ್ಲಿ ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಶ್ವವಿದ್ಯಾಲಯ ದೃಶ್ಯಕಲಾ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಪಿ.ಆರ್. ತಿಪ್ಪೇಸ್ವಾಮಿ ಕಲಾ ಸಂಭ್ರಮ, ಪಿಆರ್‌ಟಿ ಕಲಾ ಪ್ರಶಸ್ತಿ ಪ್ರದಾನ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ತಿಪ್ಪೇಸ್ವಾಮಿಯವರು ಕಾಲದ ಸದುಪಯೋಗ ಪಡೆದುಕೊಳ್ಳುವ ಮೂಲಕ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಕಲಾ ಪ್ರೌಢಿಮೆಯನ್ನು ಮೆರೆದವರು. ಅವರ ಸಾಧನೆ ಬಹುದೊಡ್ಡದು. ಚಿತ್ರಕಲೆ ಮಾತ್ರವಲ್ಲದೇ ಸಾಹಿತಿಯಾಗಿ, ಸಂಸ್ಕೃತಿಯ ಹರಿಕಾರರಾಗಿ, ಎಲ್ಲಕ್ಕಿಂತ ಹೆಚ್ಚಾಗಿ ಮಾನವೀಯ ಅಂತಃಕರಣ ಉಳ್ಳವರಾಗಿ ಜನರ ಪ್ರೀತಿ ವಿಶ್ವಾಸ ಗಳಿಸಿಕೊಂಡವರು ತಿಪ್ಪೇಸ್ವಾಮಿ ಎಂದು ಹೇಳಿದರು.

ಸಜ್ಜನರು, ಸಾತ್ವಿಕರು, ಸಮಾಜಮುಖಿ ಚಿಂತಕರನ್ನು ಬೇಗ ಮರೆಯುತ್ತೇವೆ. ಇದು ನಮ್ಮ ನಾಡಿನ ದುರಂತವೇ ಸರಿ. ನಕಾರಾತ್ಮಕ ಚಿಂತನೆ ಬದಲು ಸಕಾರಾತ್ಮಕ ಚಿಂತನೆಗಳನ್ನು ರೂಢಿಸಿಕೊಳ್ಳಬೇಕು. ಎಲ್ಲಿ ಒಳ್ಳೆಯದು ಇದೆಯೋ ಅದನ್ನು ಮೆಚ್ಚುವ, ಪ್ರೋತ್ಸಾಹಿಸುವ, ಸಾಧ್ಯವಾದಷ್ಟು ಅದಕ್ಕೆ ಮಾನ್ಯತೆ ಕೊಡುವಂತಹ ಕಾರ್ಯವನ್ನು ಮಾಡಿದಾಗ ಅಂತಹ ಹತ್ತಾರು ತಿಪ್ಪೇಸ್ವಾಮಿಗಳು ಹುಟ್ಟಿಕೊಳ್ಳಲು ಸಾಧ್ಯವಿದೆ ಎಂದರು.

ತಿಪ್ಪೇಸ್ವಾಮಿ ಅವರು ನಾನು ಮಾಡಿದೇ ಎಂಬ ಭಾವನೆ ಬೆಳೆಸಿಕೊಳ್ಳದೇ ಬದಲಾಗಿ ಸೇವೆಗಾಗಿ ಭಗವಂತ ಅವಕಾಶ ಕಲ್ಪಿಸಿಕೊಟ್ಟನಲ್ಲಾ ಎನ್ನುವ ಭಾವನೆ ಮೈಗೂಡಿಸಿಕೊಂಡವರು. ಅಂತವರ ಸ್ಮರಣೆ ಕಾರ್ಯ ಮಾಡುತ್ತಿರುವ ಪ್ರತಿಷ್ಠಾನದ ಕಾರ್ಯ ಶ್ಲಾಘನೀಯ ಎಂದು ಹೇಳಿದರು. (3ನೇ ಪುಟಕ್ಕೆ)

# ಬಿಜೆಪಿ ವಿರುದ್ಧ ಪ್ರತಿಪಕ್ಷಗಳ ಜಾತಿ ಅಸ್ತ್ರ

## ಜಾತಿ ಗಣತಿ, ಮೀಸಲಾತಿ ಮಿತಿ ತೆರವು 2024ರ ಚುನಾವಣಾ ಅಸ್ತ್ರವಾಗುವ ಸಾಧ್ಯತೆ

**ಬಿಜೆಪಿ ಹಿಂದಿನಿಂದಲೂ ಹಿಂದುತ್ವ ಪ್ರತಿಪಾದಿಸುತ್ತಾ ಬಂದಿದೆ. ಬಿಜೆಪಿ ವಿರುದ್ಧ ಪ್ರತಿಪಕ್ಷಗಳು ಜಾತಿಯ ಅಸ್ತ್ರ ಪ್ರಯೋಗಿಸುವ ಸಾಧ್ಯತೆ ಇದೆ. ಜಾತಿ ವಿಷಯದಲ್ಲಿ ಪ್ರತಿಪಕ್ಷಗಳು ಒಮ್ಮತಕ್ಕೆ ಬರುವ ಸಾಧ್ಯತೆಯೂ ಇದೆ.**

ನವದೆಹಲಿ, ಏ. 18 - ಜಾತಿ ಗಣತಿ ನಡೆಸಬೇಕು ಹಾಗೂ ಮೀಸಲಾತಿಯ ಮೇಲಿನ ಮಿತಿ ತೆರವುಗೊಳಿಸಬೇಕು ಎಂದು ಪ್ರತಿಪಕ್ಷಗಳು ಒಗ್ಗಟ್ಟಿನಿಂದ ದನಿ ಎತ್ತುತ್ತಿರುವುದು ಮುಂಬರುವ 2024ರ ಲೋಕಸಭಾ ಚುನಾವಣೆಯಲ್ಲಿ ಸರ್ಕಾರದ ವಿರುದ್ಧ ಪ್ರಬಲ ಅಸ್ತ್ರವಾಗುವ ಸಾಧ್ಯತೆ ಇದೆ.

ಬಿಜೆಪಿಯ ರಾಜಕೀಯ ಧೃವೀಕರಣ ರಾಜಕೀಯವನ್ನು ಸೋಲಿಸಲು ಸಾಮಾಜಿಕ ನ್ಯಾಯ ಆಧರಿತ ರಾಜಕೀಯವೇ ಸೂಕ್ತ ಎಂದು ಬಿಹಾರದ ಉಪ ಮುಖ್ಯಮಂತ್ರಿ ಹಾಗೂ ಆರ್.ಜೆ.ಡಿ. ನಾಯಕ ತೇಜಸ್ವಿ ಯಾದವ್ ಹೇಳಿದ್ದಾರೆ.


ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕರ್ನಾಟಕದ ಕೋಲಾರದಲ್ಲಿ ಮಾತನಾಡುತ್ತಾ, ಶೇ.50ರ ಮೀಸಲಾತಿ ಮಿತಿ ತೆರವುಗೊಳಿಸಬೇಕು ಹಾಗೂ ಜಾತಿ ಗಣತಿ ಬಹಿರಂಗಪಡಿಸಬೇಕು ಎಂದು ಒತ್ತಾಯಿಸಿದ್ದಾರೆ.

ರಾಹುಲ್ ಹೇಳಿಕೆಗೆ ತಿರುಗೇಟು ನೀಡಿದ್ದ ಬಿಜೆಪಿ, ಕರ್ನಾಟಕದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಇದ್ದಾಗ ಪರಿಶಿಷ್ಟ ಜಾತಿ, ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ಬೇಡಿಕೆಗಳನ್ನು ಬಾಕಿ ಉಳಿಸಲಾಗಿತ್ತು ಎಂದು ಹೇಳಿತ್ತು.

ಜಾತಿ ಗಣತಿ ಹಾಗೂ ಮೀಸಲಾತಿ ಮಿತಿ ಹೆಚ್ಚಿಸುವ ಬೇಡಿಕೆಯ ಮೂಲಕ ಪ್ರತಿಪಕ್ಷಗಳಲ್ಲಿ ಒಮ್ಮತ ತರಬಹುದು. ಇದೇ ವೇಳೆ ಬಿಜೆಪಿ ಸ್ಪಷ್ಟ ನಿಲುವು ತಳೆಯುವಂತೆ ಒತ್ತಡ ಹೇರಬಹುದು. ಇದರ ಜೊತೆಗೆ ಹಿಂದುತ್ವದ ವಿರುದ್ಧ ಪ್ರತಿದಾಳಿ ನಡೆಸಬಹುದು ಎಂಬ ನಿಲುವು ವ್ಯಕ್ತವಾಗುತ್ತಿದೆ. (3ನೇ ಪುಟಕ್ಕೆ)

# ಸುಡಾನ್‌ನಲ್ಲಿ ಸಿಲುಕಿದ ಜನರು

## ಸಿದ್ದರಾಮಯ್ಯ ಹೇಳಿಕೆಗೆ ವಿದೇಶಾಂಗ ಸಚಿವ ಜೈಶಂಕರ್ ಆಕ್ಷೇಪ



ನವದೆಹಲಿ, ಏ. 18-ಹಿಂಸಾಚಾರ ಪೀಡಿತ ಸುಡಾನ್‌ನಲ್ಲಿ 31 ಹಕ್ಕಿ ಪಿಕ್ಕಿ ಸಮುದಾಯದ ಜನರು ಸಿಲುಕಿರುವ ವರದಿಗಳಿವೆ. ಇವರನ್ನು ರಕ್ಷಿಸಬೇಕೆಂದು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಕ್ಷಣವೇ ಮಧ್ಯ ಪ್ರವೇಶಿಸಿ ಇವರನ್ನು ಸುರಕ್ಷಿತವಾಗಿ ವಾಪಸ್ ತರಬೇಕು. ಕಳೆದ ಕೆಲ ದಿನಗಳಿಂದ ಹಕ್ಕಿ ಪಿಕ್ಕಿ ಜನಾಂಗದವರು ಆಹಾರವಿಲ್ಲದೇ ಅತಂತ್ರರಾಗಿದ್ದಾರೆ. ಸರ್ಕಾರ ಅವರನ್ನು ವಾಪಸ್ ತರಲು ಇನ್ನೂ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ ಎಂದು ಸಿದ್ದರಾಮಯ್ಯ ಆಕ್ಷೇಪಿಸಿದ್ದರು.

ಕೇಂದ್ರ ಸರ್ಕಾರ ರಾಯಭಾರಿ ಮಾರ್ಗವನ್ನು ತಕ್ಷಣವೇ ತೆರೆಯಬೇಕು. ಅಂತರರಾಷ್ಟ್ರೀಯ ಸಮುದಾಯಗಳ ಮೂಲಕ ಹಕ್ಕಿ ಪಿಕ್ಕಿ ಜನಾಂಗದವರ ಸುರಕ್ಷತೆಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದ್ದರು.

ಸಿದ್ದರಾಮಯ್ಯ ಹೇಳಿಕೆಗೆ ಆಕ್ಷೇಪಿಸಿರುವ ವಿದೇಶಾಂಗ ಸಚಿವ ಎಸ್. ಜೈಶಂಕರ್, ಇದು ಜೀವಗಳ ಪ್ರಶ್ನೆಯಾಗಿದೆ. ಇದರಲ್ಲಿ ರಾಜಕೀಯ ಬೇಡ. ಏಪ್ರಿಲ್ 14ರಿಂದ ಸಂಘರ್ಷ ಆರಂಭವಾದ ನಂತರ ಖರ್ಟೌಮ್‌ನಲ್ಲಿರುವ ಭಾರತದ ರಾಯಭಾರಿ ಕಚೇರಿ ನಿರಂತರವಾಗಿ ಸೂಡಾನ್‌ನಲ್ಲಿರುವ ಭಾರತೀಯರ ಸಂಪರ್ಕದಲ್ಲಿದೆ ಎಂದು ತಿಳಿಸಿದ್ದಾರೆ.

ರಕ್ಷಣಾ ಕಾರಣದಿಂದಾಗಿ ಅಲ್ಲಿರುವ ಭಾರತೀಯರ ವಿವರಗಳು ಹಾಗೂ ಸ್ಥಳಗಳನ್ನು ಬಹಿರಂಗ ಪಡಿಸುವ ಹಾಗಿಲ್ಲ. ತೀವ್ರ ಹೋರಾಟದ ಕಾರಣದಿಂದಾಗಿ ಸಂಚಾರದ ಮೇಲೆ ನಿರ್ಬಂಧವಿದೆ ಎಂದು ಜೈಶಂಕರ್ ಹೇಳಿದ್ದಾರೆ. ಈ ಪರಿಸ್ಥಿತಿಯನ್ನು ರಾಜಕೀಯಗೊಳಿಸುವುದು ತೀವ್ರ ಬೇಜವಾಬ್ದಾರಿಯಾಗಿದೆ. ರಾಜಕೀಯ ಗುರಿಗಾಗಿ ವಿದೇಶದಲ್ಲಿರುವ ಭಾರತೀಯರ ಅಪಾಯಕ್ಕೆ ಸಿಲುಕಿಸುವುದು ಸಮರ್ಥನೀಯವಲ್ಲ ಎಂದಿದ್ದಾರೆ.

# ಹರಿಹರ: ನಂದಿಗಾವಿ ಶ್ರೀನಿವಾಸ್‌ಗೆ ಟಿಕೆಟ್

## ಶಾಸಕ ರಾಮಪ್ಪಗೆ ಟಿಕೆಟ್ ಇಲ್ಲ



ಬೆಂಗಳೂರು, ಏ. 18 – ಕಾಂಗ್ರೆಸ್ ಪಕ್ಷ ತನ್ನ ಅಭ್ಯರ್ಥಿಗಳ ನಾಲ್ಕನೇ ಪಟ್ಟಿ ಪ್ರಕಟಿಸಿದ್ದು, ಹರಿಹರದ ಹಾಲಿ ಶಾಸಕ ಎಸ್. ರಾಮಪ್ಪ ಅವರಿಗೆ ಟಿಕೆಟ್ ನಿರಾಕರಿಸಿದೆ. ಅವರ ಬದಲು ನಂದಿಗಾವಿ ಶ್ರೀನಿವಾಸ್ ಸ್ಪರ್ಧಿಸಲು ಪಕ್ಷ ಟಿಕೆಟ್ ನೀಡಿದೆ.

ಟಿಕೆಟ್‌ಗಾಗಿ ರಾಮಪ್ಪ ತೀವ್ರ ಪ್ರಯತ್ನ ನಡೆಸಿದ್ದರು. ಮೊದಲ ಮೂರು ಪಟ್ಟಿಗಳಲ್ಲಿ ಟಿಕೆಟ್ ನೀಡದೇ ಇರುವುದಕ್ಕೆ ಅಸಮಾಧಾನ ಸಹ ಹೊರ ಹಾಕಿದ್ದರು. ಆದರೂ, ಪಕ್ಷ ಹಾಲಿ ಶಾಸಕರಿಗೆ ಟಿಕೆಟ್ ನೀಡಿಲ್ಲ. ಇತ್ತೀಚೆಗಷ್ಟೇ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದ ಮಾಜಿ ಮುಖ್ಯಮಂತ್ರಿ (3ನೇ ಪುಟಕ್ಕೆ)

# ಮಾಯಕೊಂಡ ಬಂಡಾಯ ಶೀಘ್ರ ಶಮನ

## ಮೆರವಣಿಗೆ ಮೂಲಕ ತೆರಳಿ ಬಿಜೆಪಿ ಅಭ್ಯರ್ಥಿ ಬಸವರಾಜನಾಯ್ಕ ನಾಮಪತ್ರ ಸಲ್ಲಿಕೆ



ದಾವಣಗೆರೆ, ಏ.18- ಮಾಯಕೊಂಡ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ್ ನಾಯ್ಕ ಮಂಗಳವಾರ ನಗರದ ಗಾಂಧಿ ವೃತ್ತದಿಂದ ತೆರೆದ ವಾಹನದಲ್ಲಿ ಕಾರ್ಯಕರ್ತರ ಜೊತೆ ಮೆರವಣಿಗೆ ಮೂಲಕ ತಹಶೀಲ್ದಾರ್ ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದಲ್ಲಿ ನಾನು ಉತ್ತಮ ಕೆಲಸ ಮಾಡಿರುವುದರಿಂದ ರಾಜ್ಯ ನಾಯಕರು, ರಾಷ್ಟ್ರ ನಾಯಕರು ನನ್ನನ್ನು ಗುರುತಿಸಿ ಟಿಕೆಟ್ ನೀಡಿದ್ದಾರೆ. ಈ ಬಾರಿ ಮಾಯಕೊಂಡದಲ್ಲಿ ಬಿಜೆಪಿ ಗೆಲ್ಲುವುದು ನಿಶ್ಚಿತ ಎಂದು ಹೇಳಿದರು.

ಸಂಸದ ಜಿ. ಎಂ. ಸಿದ್ದೇಶ್ವರ, ಶಾಸಕ ಎಸ್. ಎ. ರವೀಂದ್ರನಾಥ್, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಶಿವಯೋಗಿಸ್ವಾಮಿ, ಮಂಡಲದ ಅಧ್ಯಕ್ಷ ದೇವೇಂದ್ರಪ್ಪ ಸೇರಿದಂತೆ ಎಲ್ಲಾ ನಾಯಕರು (2ನೇ ಪುಟಕ್ಕೆ)

### ಲಿಂಗಾಯತರಿಗೆ ಬಿಜೆಪಿ ಮೋಸ ಮಾಡಿಲ್ಲ: ಸಿದ್ದೇಶ್ವರ

ದಾವಣಗೆರೆ, ಏ. 18- ಲಿಂಗಾಯತರಿಗೆ ಬಿಜೆಪಿ ಮೋಸ ಮಾಡಿಲ್ಲ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು. ನಗರದ ತಹಶೀಲ್ದಾರ್ ಕಚೇರಿ ಬಳಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮಾಜಿ ಸಿಎಂ ಜಗದೀಶ್ ಶೆಟ್ಟರ್, ಮಾಜಿ ಸಚಿವ ಲಕ್ಷಣ ಸವದಿ ಬಿಜೆಪಿ ಬಿಟ್ಟಿದ್ದಾರೆ. ಪಕ್ಷದಲ್ಲಿ ಇನ್ನು ಲಿಂಗಾಯತ ಸಮುದಾಯದ ನಾಯಕರಿದ್ದಾರೆ. ಯಾವುದೇ ಸಮಸ್ಯೆ ಇಲ್ಲ. ಏನಿದ್ದರೂ ವರಿಷ್ಠರು ತೀರ್ಮಾನ ತೆಗೆದುಕೊಳ್ಳುತ್ತಾರೆ. ನನ್ನದೇನಿದ್ದರೂ ದಾವಣಗೆರೆ ಲೋಕಸಭಾ ಕ್ಷೇತ್ರದ ವ್ಯಾಪ್ತಿ ಅಷ್ಟೇ ಎಂದು ಹೇಳಿದರು.

ಹರಪನಹಳ್ಳಿ ವಿಧಾನಸಭಾ ಕ್ಷೇತ್ರವೂ ದಾವಣಗೆರೆ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ (2ನೇ ಪುಟಕ್ಕೆ)

# ಮಂಡ್ಯದಿಂದ ಸ್ಪರ್ಧಿಸುವುದಿಲ್ಲ ಕುಮಾರಸ್ವಾಮಿ ಸ್ಪಷ್ಟನೆ



ಬೆಂಗಳೂರು, ಏ. 18 - ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡುವ ಮಾತೇ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣ ಬಿಟ್ಟು ಬೇರೆಲ್ಲೂ ನಾನು ಸ್ಪರ್ಧೆ ಮಾಡಲ್ಲ. ಮಂಡ್ಯದಲ್ಲಿ ಈಗಾಗಲೇ ಪ್ರಬಲ ಅಭ್ಯರ್ಥಿಗಳು ಇದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಅಲ್ಲಿ ಸ್ಪರ್ಧಿಸುವುದಿಲ್ಲ ಎಂದರು.

ಕಾರ್ಯಕರ್ತರ ಒತ್ತಡ ಇರುವುದು ನಿಜ. ಆದರೆ ಮಂಡ್ಯದಿಂದ ನಾನು ಸ್ಪರ್ಧೆ ಮಾಡುವುದಕ್ಕೆ ಆಗಲ್ಲ. ನಾನು ಚನ್ನಪಟ್ಟಣದಿಂದ ಮಾತ್ರ ಸ್ಪರ್ಧೆ ಮಾಡುತ್ತಿದ್ದೇನೆ ಎಂದರು.

ಚನ್ನಪಟ್ಟಣ ಬಿಟ್ಟು ಬೇರೆಲ್ಲೂ ನಾನು ಹೋಗಲ್ಲ. ಮಂಡ್ಯದಲ್ಲಿ ಅಭ್ಯರ್ಥಿಗಳು ಇದ್ದಾರೆ. ಈ ಬಗ್ಗೆ ಕೂತು ತೀರ್ಮಾನ ಮಾಡುತ್ತೇವೆ. ನಾಳೆ ಮೂರನೇ ಪಟ್ಟಿ ಬಿಡುಗಡೆ ಆಗಲಿದೆ ಎಂದು ಹೇಳಿದರು.

# ಎಸ್ಸೆಸ್ಸೆಲ್ಸಿ ಮೌಲ್ಯಮಾಪನ ಆರಂಭ ಕೇಂದ್ರಗಳ ಸುತ್ತಮುತ್ತ ನಿಷೇಧಾಜ್ಞೆ

ದಾವಣಗೆರೆ, ಏ. 18- ಎಸ್ಸೆಸ್ಸೆಲ್ಸಿ ಮೌಲ್ಯಮಾಪನವು ಇಂದಿನಿಂದ ನಗರದ 7 ಕೇಂದ್ರಗಳಲ್ಲಿ ನಡೆಯುತ್ತಿದ್ದು, ಆ ಎಲ್ಲಾ ಕೇಂದ್ರಗಳ ಸುತ್ತಮುತ್ತ 144 ನೇ ಸೆಕ್ಷನ್ ಅನ್ವಯ 200 ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ, ಜಿಲ್ಲಾ ದಂಡಾಧಿಕಾರಿ ಶಿವಾನಂದ ಕಾಪಶಿ ಆದೇಶಿಸಿದ್ದಾರೆ.

ಈ ಆದೇಶವು ಮೌಲ್ಯಮಾಪನ ಮುಕ್ತಾಯವಾಗುವವರೆಗೆ ಜಾರಿಯಲ್ಲಿ ರುತ್ತದೆ. ರಾಜನಹಳ್ಳಿ ಸೀತಮ್ಮ ಬಾಲಕಿಯರ ಪ.ಪೂ. ಕಾಲೇಜು, ಅಥಣಿ ಪ್ರೌಢಶಾಲೆ, ಬಾಲಕರ ಸರ್ಕಾರಿ ಪ.ಪೂ. ಕಾಲೇಜು ಪ್ರೌಢಶಾಲಾ ವಿಭಾಗ, ಡಿ.ಆರ್.ಆರ್.ಪ್ರೌಢಶಾಲೆ, ಶ್ರೀ ಸೋಮೇಶ್ವರ ವಿದ್ಯಾಲಯ, ಶ್ರೀ ಮಾಗನೂರು ಬಸಪ್ಪ ಪ್ರೌಢಶಾಲೆ, ಬಾಪೂಜಿ ಪ್ರೌಢಶಾಲೆಗಳಲ್ಲಿ ಪರೀಕ್ಷಾ ಮೌಲ್ಯಮಾಪನ ನಡೆಯುತ್ತಿದೆ.


|| ಶ್ರೀ ಸಿದ್ದರಾಮೇಶ್ವರ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ**




ದಾವಣಗೆರೆ ನಗರ ಎಸ್.ಎಸ್. ಬಡಾವಣೆ ವಾಸಿ
ಶ್ರೀಮತಿ ಡಾ|| ಅನಿತಾ ರವಿ ಮತ್ತು ಮಗಳು ಡಾ|| ಮನೋಜ್ಞ ರವಿ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 15.04.2023ನೇ ಶನಿವಾರ ಮಧ್ಯಾಹ್ನ 1.15 ಗಂಟೆಗೆ
ನನ್ನ ಪೂಜ್ಯ ಪತಿಯವರು ಹಾಗೂ
ಆನೆಕೊಂಡದ ದಿ|| ರಾಮಗಿರಿ ಬಸಪ್ಪ ಮತ್ತು ದಿ|| ಶ್ರೀಮತಿ ಶಾರದಮ್ಮನವರ ಪುತ್ರ
**ಶ್ರೀ ಡಾ|| ಆರ್. ರವಿ,** ಅರವಳಿಕೆ ತಜ್ಞರು
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆ"ಯನ್ನು
ದಿನಾಂಕ : 19.04.2023ನೇ ಬುಧವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ಹದಡಿ ರಸ್ತೆಯಲ್ಲಿರುವ ತರಳಬಾಳು ಸಭಾ ಭವನ (ಎಸ್.ಎಸ್. ಮಿನಿ ಛತ್ರ) ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಡಾ|| ಅನಿತಾ ರವಿ ಮತ್ತು ಮಗಳು ಡಾ|| ಮನೋಜ್ಞ ರವಿ
ರಾಮಗಿರಿ ವಂಶಸ್ಥರು, ಆನೆಕೊಂಡ ಹಾಗೂ ಅಬ್ಬಿಗೆರೆ ವಂಶಸ್ಥರು,
ಗುಂಜಿಗನೂರು ಮತ್ತು ಬಂಧು-ಮಿತ್ರರು.



**ಪರಮೇಶ್ವರಪ್ಪ ವಿ.ಎನ್. ನಿಧನ**



ದಾವಣಗೆರೆ ತಾಲ್ಲೂಕು, ಜಿಲ್ಲೆ ವೊಡ್ಡಿನಹಳ್ಳಿ ವಾಸಿ
ಉಳ್ಳಾಗಡ್ಡಿ ದಿ|| ಚನ್ನಬಸಮ್ಮ ಮತ್ತು ದಿ|| ನಿಂಗಪ್ಪನವರ ಮಗನಾದ
**ಶ್ರೀ ಪರಮೇಶ್ವರಪ್ಪ ವಿ.ಎನ್.**
(73 ವರ್ಷ) ಇವರು ದಿನಾಂಕ ; 18.04.2023ರ ಮಂಗಳವಾರ 1.45ಕ್ಕೆ ನಿಧನರಾಗಿರುತ್ತಾರೆ.
ಪತ್ನಿ, ಇಬ್ಬರು ಗಂಡು ಮಕ್ಕಳು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 19.04.2023ರ ಬುಧವಾರ ಮಧ್ಯಾಹ್ನ 1.30 ಗಂಟೆಗೆ ವೊಡ್ಡಿನಹಳ್ಳಿಯ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗದವರು
ಫೋ. : 95388 90580, 98452 15166

# ರೇಣುಕಾಚಾರ್ಯ ನನಗೆ ಎನರ್ಜಿ, ನಾನು ಅವರಿಗೆ ಅಲರ್ಜಿ




**ಹೊನ್ನಾಳಿ ಕಾಂಗ್ರೆಸ್ ಅಭ್ಯರ್ಥಿ ಡಿ.ಜಿ. ಶಾಂತನಗೌಡ ವಿಶ್ಲೇಷಣೆ**

ಹೊನ್ನಾಳಿ,ಏ. 18- ಶಾಸಕ ಎಂ.ಪಿ. ರೇಣುಕಾಚಾರ್ಯ ಅವರೇ ನನಗೆ ಎನರ್ಜಿ, ಅವರಿಗೆ ನಾನು ಅಲರ್ಜಿ ಎಂಬುದಾಗಿ ವಿಧಾನ ಸಭೆ ಚುನಾವಣೆ ಕಾಂಗ್ರೆಸ್ ಅಭ್ಯರ್ಥಿ ಡಿ.ಜಿ. ಶಾಂತನಗೌಡ ಮಾರ್ಮಿಕವಾಗಿ ವಿಶ್ಲೇಷಿಸಿದರು.

ತಾಲ್ಲೂಕಿನ ಗೊಲ್ಲರಹಳ್ಳಿಯಿಂದ ಮೆರವಣಿಗೆ ಮೂಲಕ ಆಗಮಿಸಿ, ನಾಮಪತ್ರ ಸಲ್ಲಿಕೆಯ ಮುನ್ನ ನಡೆದ ಬೃಹತ್ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಮಾತನಾಡಿ, ಕಾಂಗ್ರೆಸ್ ಪಕ್ಷದ ಆಹಾರ ಭದ್ರತೆ, ಉಳುವವನೇ ಒಡೆಯ, ಬ್ಯಾಂಕ್ ರಾಷ್ಟ್ರೀಕರಣ, ಯುವಕರಿಗೆ ಮಾತದಾನದ ಹಕ್ಕು, ಇಂದಿರಾ ಕ್ಯಾಂಟೀನ್ ಸೇರಿದಂತೆ ಅನೇಕ ಹತ್ತು ಹಲವಾರು ಯೋಜನೆಗಳು ಬಡವರಿಗೆ ವರದಾನವಾಗಿವೆ ಎಂದರು.

ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್‌ಸಾಬ್ ಮಾತನಾಡಿ, ಸುಭದ್ರ, ಸ್ಥಿರ ಸರ್ಕಾರ ರಚನೆಗಾಗೆ ಕಾಂಗ್ರೆಸ್ಸಿನ ಅಭ್ಯರ್ಥಿ ಶಾಂತನಗೌಡರನ್ನು ಮತದಾರರು ಬೆಂಬಲಿಸಿ ಎಂದು ಮನವಿ ಮಾಡಿಕೊಂಡರು.

ಮಾಜಿ ಶಾಸಕ ಡಿ.ಜಿ.ಬಸವನಗೌಡರ ಪುತ್ರ ಡಾ.ಪ್ರಕಾಶ್ ಮಾತನಾಡಿ, ನಮ್ಮ ಚಿಕ್ಕಪ್ಪ ಶಾಂತನಗೌಡರಿಗೆ ಕಳೆದ ಚುನಾವಣೆಯಲ್ಲಿ ಅಲ್ಪ ಮತಗಳಿಂದ ಸೋಲಾಗಿದೆ. 1938 ರಿಂದಲೂ ನಮ್ಮ ಕುಟುಂಬವು ಸಾರ್ವಜನಿಕ ಕ್ಷೇತ್ರದಲ್ಲಿ ಗುರುತಿಸಿಕೊಂಡು ಜನರ ಸೇವೇ ಮಾಡುತ್ತಾ ಬಂದಿದೆ. ಈ ಹಿಂದೆ ಗೆಲ್ಲಿಸಿದಂತೆ ಈ ಚುನಾವಣೆಯಲ್ಲೂ ಗೆಲ್ಲಿಸಬೇಕೆಂದರು.

ಕಾಂಗ್ರೆಸ್ ತಾಲ್ಲೂಕು ಅಧ್ಯಕ್ಷ ಹೆಚ್.ಬಿ. ಶಿವಯೋಗಿ, ನ್ಯಾಮತಿ ಘಟಕದ ಅಧ್ಯಕ್ಷ ವಿಶ್ವನಾಥ್ ದೊಡ್ಡೇರಿ, ಸಾಸ್ವೆಹಳ್ಳಿ ಘಟಕದ ಅಧ್ಯಕ್ಷ ಆರ್. ನಾಗಪ್ಪ, ಜಿಲ್ಲಾ ಯುವ ಘಟಕದ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ದಾವಣಗೆರೆ ಘಟಕದ ಅಧ್ಯಕ್ಷ ಸುಭಾಷ್, ಬಿ. ವೀರಣ್ಣ, ಸಣ್ಣಕ್ಕಿ ಬಸವನಗೌಡ, ವರದರಾಜಪ್ಪ, ಶಿವರಾಮನಾಯ್ಕ, ಡಾ. ಈಶ್ವರನಾಯ್ಕ, ಹೆಚ್.ಎ. ಉಮಾಪತಿ, ಎಂ. ರಮೇಶ್, ಬಿ. ಸಿದ್ದಪ್ಪ, ಸಾಸ್ವೆಹಳ್ಳಿ ಗದಿಗೇಶ್, ಕೆಂಗಲಹಳ್ಳಿ ಷಣ್ಮುಖಪ್ಪ, ಜಬ್ಬಾರ್, ವಾಜೀದ್, ಮೈಲಪ್ಪ, ಕೊಡತಾಳ್ ರುದ್ರೇಶ್, ತಮ್ಮಣ್ಣ, ಮಧುಗೌಡ, ಪ್ರಶಾಂತ್ ಬಣ್ಣಜ್ಜಿ, ನ್ಯಾಮತಿ ವಾಗೀಶ್, ಹನುಮನಹಳ್ಳಿ ಬಸವರಾಜಪ್ಪ, ಕೆಂಗಲಹಳ್ಳಿ ಪ್ರಭಾಕರ್ ಸೇರಿದಂತೆ ನೂರಾರು ಕಾರ್ಯಕರ್ತರು ಇದ್ದರು.

# ಎಂ.ಪಿ.ಪ್ರಕಾಶ್ ಹಿರಿಯ ಪುತ್ರಿ ಲತಾ ನಾಮಪತ್ರ ಸಲ್ಲಿಕೆ



ಹರಪನಹಳ್ಳಿ, ಏ. 18- ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ಮಾಜಿ ಉಪಮುಖ್ಯಮಂತ್ರಿ ದಿ. ಎಂ.ಪಿ. ಪ್ರಕಾಶ್ ಅವರ ಹಿರಿಯ ಪುತ್ರಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಅವರು ಇಂದು ನಾಮಪತ್ರ ಸಲ್ಲಿಸಿದರು.

ಪಟ್ಟಣದ ಹೊರ ವಲಯದಲ್ಲಿರುವ ಶ್ರೀ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನ ಹಾಗೂ ಐತಿಹಾಸಿಕ ಶ್ರೀ ಕೋಟೆ ಆಂಜನೇಯ ದೇವಸ್ಥಾನಕ್ಕೆ ತೆರಳಿ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದ ಅವರು, ತೆರೆದ ವಾಹನದ ಮೂಲಕ ತಾಲ್ಲೂಕು ಕಛೇರಿಗೆ ತೆರಳಿ ಚುನಾವಣಾಧಿಕಾರಿ ಟಿ.ವಿ. ಪ್ರಕಾಶ್ ಅವರಿಗೆ ತಮ್ಮ ಉಮೇದುವಾರಿಕೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಲತಾ, ಕಳೆದ ನಾಲ್ಕು ವರ್ಷಗಳಿಂದ ಹರಪನಹಳ್ಳಿ ಕ್ಷೇತ್ರದಾದ್ಯಂತ ತಿರುಗಾಡಿ ಪಕ್ಷ ಕಟ್ಟಿದ್ದೇನೆ. ಕೆಲಸಕ್ಕೆ ಕೂಲಿ ಕೇಳಿದ್ದೆ, ನನಗೆ ಕೂಲಿ ಕೊಡಲಿಲ್ಲ. ಎಲ್ಲರಿಗಿಂತ ಹೆಚ್ಚಾಗಿ ಕಾಂಗ್ರೆಸ್ ಪಕ್ಷದ ಕೆಲಸ ಮಾಡಿದ್ದರೂ ನನಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಿಲ್ಲ. ನನ್ನ ಸ್ವಾಭಿಮಾನಕ್ಕೆ ಧಕ್ಕೆಬಂದ ಹಿನ್ನೆಲೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದೇನೆ ಎಂದು ತಿಳಿಸಿದರು.

ಅಕ್ಕ-ತಂಗಿಯರು ನಿಂತಿದ್ದೀರಿ? ಎಂಬ ಪತ್ರಕರ್ತರ ಪ್ರಶ್ನೆಗೆ ಕೊಟ್ಟ ಹೆಣ್ಣು ಕುಲದ ಹೊರಗೆ. ಅವರೇ ಬೇರೆ, ನಾವೇ ಬೇರೆ. ಒಂದೇ ಕುಟುಂಬದಲ್ಲಿ ಅಣ್ಣ - ತಮ್ಮ, ತಂದೆ-ಮಕ್ಕಳು ನಿಲ್ಲುವುದು ಸಹಜ. ಅದರಲ್ಲೇನು ವಿಶೇಷತೆ ಇಲ್ಲ ಎಂದು ಲತಾ ಪ್ರತಿಕ್ರಿಯಿಸಿದರು.

ಈ ವೇಳೆ ತಾ.ಪಂ. ಮಾಜಿ ಅಧ್ಯಕ್ಷ ಹಿರೇಮೇಗಳಗೆರೆ ಲಕ್ಕಳ್ಳಿ ಹನುಮಂತಪ್ಪ, ಪುರಸಭೆ ಸದಸ್ಯರುಗಳಾದ ಎಂ.ವಿ. ಅಂಜಿನಪ್ಪ, ಟಿ. ವೆಂಕಟೇಶ, ಡಿ. ಅಬ್ದುಲ್ ರಹಿಮಾನ್, ಗೊಂಗಡಿ ನಾಗರಾಜ, ಲಾಟಿ ದಾದಾಪೀರ್, ಹೆಚ್. ಕೊಟ್ರೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಎಂ. ಬಸವರಾಜಯ್ಯ, ಮುಖಂಡರಾದ ಕೆ. ಚಂದ್ರೇಗೌಡ, ಬಿ.ಕೆ. ಪ್ರಕಾಶ, ಹೆಚ್.ಎಂ. ಮಲ್ಲಿಕಾರ್ಜುನಯ್ಯ, ಹೆಚ್.ಎಂ.ಕೊಟ್ರಯ್ಯ, ಮುದಗಲ್ ಗುರುನಾಥ, ಬಾಣದ ಅಂಜಿನಪ್ಪ, ಟಿ. ಉಮಾಕಾಂತ, ಚಿಕ್ಕೇರಿ ಬಸಪ್ಪ, ರೈತ ಸಂಘದ ಹೆಚ್.ಎಂ. ಮಹೇಶ್ವರಸ್ವಾಮಿ, ಹೆಚ್. ವಸಂತಪ್ಪ, ತೆಲಿಗಿ ಜಿಬಿಟಿ ಮಹೇಶ, ಓ. ರಾಮಣ್ಣ, ಬಸಾಪುರದ ಮಂಜುನಾಥ, ಮತ್ತೂರು ಬಸವರಾಜ, ರವಿಶಂಕರ್, ಜಟ್ಟೆಪ್ಪರ ಮಂಜುನಾಥ, ಕಂಚಿಕೇರಿ ಜಯಲಕ್ಷ್ಮಿ, ಗುಂಡಗತ್ತಿ ನೇತ್ರಾವತಿ, ಹೆಚ್. ಟಿ. ವನಜಾಕ್ಷಿ, ಗೊಂಗಡಿ ಸಹನ, ಉಮಾ ಶಂಕರ್, ಕವಿತ ಸುರೇಶ್, ಭಾಗ್ಯಮ್ಮ, ನಂದಿಬೇವೂರು ಗ್ರಾ.ಪಂ. ಉಪಾಧ್ಯಕ್ಷೆ ಲಕ್ಷ್ಮಿ ಚಂದ್ರಶೇಖರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಜಗಳೂರು : ಬೇಸಿಗೆ ಹಂಗಾಮಿನಲ್ಲಿ ಬೀಜೋತ್ಪಾದನೆ ಮಾಡಿ ಹೆಚ್ಚು ಆದಾಯ ಗಳಿಸಬಹುದು



ಜಗಳೂರು, ಏ. 18 - ತಾಲ್ಲೂಕಿನ ಸಿದ್ದಮ್ಮನಹಳ್ಳಿ ಗ್ರಾಮದಲ್ಲಿ ರಾಷ್ಟ್ರೀಯ ಎಣ್ಣೆ ಕಾಳು ಯೋಜನೆ ಅಡಿಯ ಗುಚ್ಛ ಗ್ರಾಮಗಳ ಮುಂಚೂಣಿ ಪ್ರಾತ್ಯಕ್ಷಿಕೆ ಶೇಂಗಾ ಬೆಳೆಯ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು.

ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ, ಶೇಂಗಾ ಪ್ರಮುಖವಾದ ಎಣ್ಣೆ ಕಾಳು ಬೆಳೆ, ನವೀನ ತಳಿಗಳಾದ G2-52 ಈ ಭಾಗದಲ್ಲಿ ಹೆಚ್ಚು ಬೆಳೆಯಲಾಗುತ್ತಿದ್ದು, ರೈತರು ಬೇಸಿಗೆ ಹಂಗಾಮಿನಲ್ಲಿ ಬೀಜೋದ್ಪಾದನೆ ಮಾಡಿ ಹೆಚ್ಚು ಆದಾಯವನ್ನು ಗಳಿಸಬಹುದು ಹಾಗೂ ಹೈನುಗಾರಿಕೆ ಮಾಡುವ ರೈತರಿಗೆ ಶೇಂಗಾದ ಹಸಿರು ಮೇವು ಹಾಗೂ ಒಣಗಿದ ಹೊಟ್ಟು ಕೂಡ ಸಿಗುತ್ತದೆ ಎಂದರು.

ಸಸ್ಯ ಸಂರಕ್ಷಣಾ ತಜ್ಞರಾದ ಡಾ. ಅವಿನಾಶ್ ಟಿ.ಜಿ ರವರು ಸರಿಯಾದ ಸಮಯಕ್ಕೆ ನೀರು, ಗೊಬ್ಬರ ಹಾಗೂ ಕೀಟಗಳ ನಿರ್ವಹಣೆ ಮಾಡಿದರೆ ಅಧಿಕ ಇಳುವರಿ ಪಡೆಯ ಬಹುದು ಎಂದರು. ಪ್ರಗತಿಪರ ರೈತರಾದ ಬಸವರಾಜ್ ಮಾತನಾಡುತ್ತಾ ಶೇಂಗಾ ಬೆಳೆಯು, ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳ ಮಾರ್ಗದರ್ಶನದಲ್ಲಿ ಉತ್ತಮವಾಗಿ ಬಂದಿದ್ದು, ವಾತಾವರಣದ ವೈಫಲ್ಯದಿಂದ ಇಳುವರಿಯು ಕಡಿಮೆಯಾಗಬಹುದು ಎಂದರು.

ಕಾರ್ಯಕ್ರಮದಲ್ಲಿ ಸಿದ್ದಮ್ಮನಹಳ್ಳಿಯ ಮುಂಚೂಣಿ ಪ್ರಾತ್ಯಕ್ಷಿಕೆ ರೈತರು ಭಾಗವಹಿಸಿದ್ದರು.

# ಅತ್ತಿಗೆರೆ ಗ್ರಾಮದಲ್ಲಿ ಅಂಬೇಡ್ಕರ್ ಜಯಂತಿ



ದಾವಣಗೆರೆ, ಏ.18- ತಾಲ್ಲೂಕಿನ ಅತ್ತಿಗೆರೆಯಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ. ಆರ್ ಅಂಬೇಡ್ಕರ್ ಅವರ 132ನೇ ಜಯಂತಿ ಆಚರಿಸಲಾಯಿತು.

ಈ ವೇಳೆ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಕುಂದುವಾಡ ಮಂಜುನಾಥ್, ಮಹಿಳಾ ಒಕ್ಕೂಟದ ವಿಜಯಮ್ಮ, ತಾಲ್ಲೂಕು ಸಂಚಾಲಕ ಅಣಜಿ ಹನುಮಂತಪ್ಪ, ಬನ್ನಿಹಟ್ಟಿ ನಿಂಗಪ್ಪ, ಮಂಜುನಾಥ್ ಎಲೆಕ್ಟ್ರಿಕಲ್ ಸೇರಿ ದಂತೆ, ಗ್ರಾಮದ ಮುಖಂಡರು, ಮಹಿಳೆಯರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಮೇಗಳಗೆರೆಯಲ್ಲಿ ಅಂಬೇಡ್ಕರ್ ಜಯಂತಿ



ಹರಪನಹಳ್ಳಿ, ಏ.18- ತಾಲ್ಲೂಕಿನ ಚಿಕ್ಕಮೇಗಳಗೆರೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಯುವಕರ ಸಂಘದ ವತಿಯಿಂದ ಭಾರತ ರತ್ನ, ಡಾ.ಬಿ.ಆರ್. ಅಂಬೇಡ್ಕರ್ ಅವರ 132ನೇ ಜಯಂತ್ಯೋತ್ಸವವನ್ನು ಸಡಗರ, ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮದ ಮಹಿಳೆಯರು, ವಿದ್ಯಾರ್ಥಿಗಳು, ಮುಖಂಡರು ಭಾಗವಹಿಸಿದ್ದರು.

# ಮಾಯಕೊಂಡ ಬಂಡಾಯ ಶೀಘ್ರ ಶಮನ

**(1ನೇ ಪುಟದಿಂದ)** ಬೆಂಬಲವಾಗಿ ನಿಂತಿದ್ದಾರೆ. ಯಾವುದೇ ಕಾರಣಕ್ಕೂ ಬಿಜೆಪಿಗೆ ಹಿನ್ನಡೆ ಆಗುವುದಿಲ್ಲ. ಐದು ಬಾರಿ ಬಿಜೆಪಿ ಪಕ್ಷ ಮಾಯಕೊಂಡದಲ್ಲಿ ಜಯ ಗಳಿಸಿದೆ. ಆರನೇ ಬಾರಿಯೂ ಕಮಲ ಅರಳುವಂತೆ ಮಾಡಲು ಕಾರ್ಯಕರ್ತರು ಸನ್ನದ್ಧರಾಗಿದ್ದಾರೆ ಎಂದು ತಿಳಿಸಿದರು.

ಬಂಡಾಯವೆದ್ದಿರುವ 11 ಜನರ ಪೈಕಿ ನಾಲ್ವರ ಜೊತೆ ಮಾತನಾಡಿದ್ದೇನೆ. ಟಿಕೆಟ್ ಕೈತಪ್ಪಿದ್ದರಿಂದ ಸಹಜವಾಗಿಯೇ ಅಸಮಾಧಾನಗೊಂಡಿದ್ದಾರೆ. ನಾವೆಲ್ಲರೂ ಸಹೋದರರಂತೆ. ಇನ್ನೆರಡು ದಿನಗಳಲ್ಲಿ ಎಲ್ಲವೂ ಸರಿಹೋಗಲಿದೆ. ಅವರೆಲ್ಲಾ ನಾಮಪತ್ರ ಸಲ್ಲಿಕೆ ಮಾಡಬಹುದು. ಆದರೆ ವಾಪಸ್ ತೆಗೆದುಕೊಳ್ಳಲು ಸಮಯಾವಕಾಶ ಇದೆ. ಮನವೊಲಿಸುವ ಕಾರ್ಯ ನಡೆಯುತ್ತಿದೆ ಎಂದರು.

ಸಂಸದ ಜಿ. ಎಂ. ಸಿದ್ದೇಶ್ವರ ಮಾತನಾಡಿ, ಮಾಯಕೊಂಡ ವಿಶಿಷ್ಟ ಕ್ಷೇತ್ರ. ಈ ಹಿಂದೆ ಶಾಸಕರಾಗಿ ಬಸವರಾಜ್ ನಾಯ್ಕ್ ಉತ್ತಮ ಕೆಲಸ ಮಾಡಿದ್ದಾರೆ. ಈ ಬಾರಿ ಪಕ್ಷವು ಟಿಕೆಟ್ಕೊಟ್ಟಿದೆ. ಎಲ್ಲರೂ ಕಮಲ ಅರಳುವಂತೆ ಮಾಡಿ ಎಂದರು. ಶಾಸಕ ಪ್ರೊ. ಎನ್. ಲಿಂಗಣ್ಣ, ಮಾಯಕೊಂಡ ಬಿಜೆಪಿ ಮಂಡಲ ಅಧ್ಯಕ್ಷ ದೇವೇಂದ್ರಪ್ಪ ಮತ್ತಿತರರು ಹಾಜರಿದ್ದರು.

## ಮೋಸ ಮಾಡಿಲ್ಲ: ಸಿದ್ದೇಶ್ವರ


**(1ನೇ ಪುಟದಿಂದ)** ಒಳಪಡುತ್ತದೆ. ಅದೂ ಸೇರಿ ದಾವಣಗೆರೆ ವ್ಯಾಪ್ತಿಯ ಎಂಟು ಕಡೆಗಳಲ್ಲಿಯೂ ಕಮಲ ಅರಳುವ ಭರವಸೆ ಇದೆ. ಎಲ್ಲೆಡೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮಾಯಕೊಂಡ ಕ್ಷೇತ್ರದಲ್ಲಿ ಬಿಜೆಪಿ ಬಂಡಾಯಗಾರರ ಜೊತೆ ನಾನು ಮಾತನಾಡಿದ್ದೇನೆ. ನಾಳೆ ಕೇಂದ್ರ ಆರೋಗ್ಯ ಸಚಿವರು ಆಗಮಿಸುತ್ತಿದ್ದು, ಎಲ್ಲರ ಜೊತೆ ಮತ್ತೊಮ್ಮೆ ಮಾತುಕತೆ ನಡೆಸಲಾಗುವುದು. ಎಲ್ಲರೂ ಬಿಜೆಪಿ ಕಾರ್ಯಕರ್ತರೇ. ಹಾಗಾಗಿ ಬಂಡಾಯ ಶಮನ ಆಗುತ್ತದೆ. ಒಂದೆರಡು ದಿನಗಳಲ್ಲಿ ಎಲ್ಲವೂ ಸರಿಹೋಗಲಿದೆ ಎಂದು ಸಿದ್ದೇಶ್ವರ ಹೇಳಿದರು.

# ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆ

ದಾವಣಗೆರೆ, ಏ. 18 - ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ಕಾಂಗ್ರೆಸ್ ಪಕ್ಷ ತೊರೆದು ಬಿಜೆಪಿಗೆ ದಿನೇ ದಿನೇ ಸೇರ್ಪಡೆಗೊಳ್ಳುತ್ತಿರುವುದು ಮುಂದುವರೆದಿದ್ದು, ಇದು ಬಿಜೆಪಿ ಪಕ್ಷಕ್ಕೆ ಮತ್ತಷ್ಟು ಬಲ ಹೆಚ್ಚಿಸಿದೆ.

ಇಂದೂ ಸಹ ಉತ್ತರ ವಿಧಾನ ಸಭಾ ಕ್ಷೇತ್ರದ ಚಿಕ್ಕ ಬೂದಿಹಾಳ್ ಗ್ರಾಮ ಪಂಚಾಯಿತಿ ಸದಸ್ಯ ಕೆ.ಎಚ್. ಭಗತ್ ಸಿಂಹ ಅವರು ಶಾಸಕ ಎಸ್.ಎ. ರವೀಂದ್ರನಾಥ್ ಅವರ ನೇತೃತ್ವದಲ್ಲಿ ಹಾಗೂ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷ ತೊರೆದು ಬಿಜೆಪಿಗೆ ಅಧಿಕೃತವಾಗಿ ಸೇರ್ಪಡೆಗೊಂಡರು.

ಈ ಸಂದರ್ಭದಲ್ಲಿ ಮುಖಂಡರಾದ ವಿ. ಲಕ್ಷ್ಮಣ, ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾದ ಮಂಜುಳಾ ಮಹೇಶ್, ಓಬಿಸಿ ಪ್ರಧಾನ ಕಾರ್ಯದರ್ಶಿ ಜಿ.ವಿ. ಗಂಗಾಧರ್, ಉತ್ತರ ಮಂಡಲದ ಪ್ರಧಾನ ಕಾರ್ಯದರ್ಶಿ ಹನುಮಂತಪ್ಪ, ಮಾಜಿ ಮಹಾಪೌರ ಎಂ.ಎಸ್. ವಿಠಲ್ ಸೇರಿದಂತೆ, ಇತರರು ಇದ್ದರು.



# ಬಿಲ್ಕಿಸ್ ಅತ್ಯಾಚಾರ ಪ್ರಕರಣ : ಶಿಕ್ಷೆ ಕಡಿತಕ್ಕೆ ಕೋರ್ಟ್ ಆಕ್ಷೇಪ

ನವದೆಹಲಿ, ಏ. 18 – ಬಿಲ್ಕಿಸ್ ಬಾನೋ ಸಾಮೂಹಿಕ ಅತ್ಯಾಚಾರ ಪ್ರಕರಣ ಹಾಗೂ ಕುಟುಂಬದವರ ಹತ್ಯೆ ಪ್ರಕರಣದಲ್ಲಿ ದೋಷಿಗಳಾಗಿದ್ದ 11 ಜನರ ಶಿಕ್ಷೆ ಕಡಿತ ಮಾಡಿರುವ ಗುಜರಾತ್ ಸರ್ಕಾರದ ಕ್ರಮವನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

ಪರಿಸ್ಥಿತಿಯ ಗಂಭೀರತೆಯ ಬಗ್ಗೆ ಸರ್ಕಾರ ತಿಳಿದಿದೆಯೇ? ಎಂದೂ ನ್ಯಾಯಾಲಯ ಪ್ರಶ್ನಿಸಿದೆ. ಗೋಧ್ರಾ ಹತ್ಯಾಕಾಂಡದ ಸಮಯದಲ್ಲಿ ಬಿಲ್ಕಿಸ್ ಬಾನೋ ಪ್ರಕರಣ ನಡೆದಿತ್ತು.

ಅಲ್ಲದೇ ಈ ಪ್ರಕರಣದಲ್ಲಿ ಕೆಲ ದೋಷಿಗಳಿಗೆ 1 ಸಾವಿರ ದಿನದಿಂದ 1,500 ದಿನಗಳವರೆಗೆ ಪೆರೋಲ್ ನೀಡಿರುವುದನ್ನೂ ನ್ಯಾಯಾಲಯ ಪ್ರಶ್ನಿಸಿದೆ.

ಮಾರ್ಚ್ 27ರಂದು ಹೊರಡಿಸಲಾದ ಆದೇಶವನ್ನು ಮರು ಪರಿಶೀಲಿಸಲಾಗುವುದು. ಈ ಬಗ್ಗೆ ಸಂಬಂಧಿಸಿದ ಕಡತಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು ಎಂದು ಕೇಂದ್ರ ಹಾಗೂ ಗುಜರಾತ್ ಸರ್ಕಾರಗಳಿಗೆ ನ್ಯಾಯಾಲಯ ತಿಳಿಸಿದೆ.

# ಅತೀಕ್ ಪರ ವಕೀಲರ ನಿವಾಸದ ಬಳಿ ಕಚ್ಚಾ ಬಾಂಬ್ ದಾಳಿ

ಪ್ರಯಾಗ್‌ರಾಜ್, ಏ. 18 - ಹತ ಗ್ಯಾಂಗ್‌ಸ್ಟರ್ ಅತೀಕ್ ಅಹಮದ್ ಪರ ವಕೀಲರ ನಿವಾಸದ ಬಳಿ ಕಚ್ಚಾ ಬಾಂಬ್ ಒಂದನ್ನು ಎಸೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಧ್ಯಾಹ್ನದ ವೇಳೆ ಕಾತ್ರ ಪ್ರದೇಶದಲ್ಲಿ ಘಟನೆ ನಡೆದಿದೆ. ಘಟನೆಯಲ್ಲಿ ಯಾರೂ ಗಾಯಗೊಂಡಿಲ್ಲ.

ಅತೀಕ್ ಪರ ವಕೀಲ ದಯಾಶಂಕರ್ ಮಿಶ್ರಾ ಗುರಿಯಾಗಿಟ್ಟುಕೊಂಡು ದಾಳಿ ನಡೆದಿಲ್ಲ. ಇಬ್ಬರು ಯುವಕರ ನಡುವಿನ ವೈಯಕ್ತಿಕ ದ್ವೇಷದ ಕಾರಣದಿಂದಾಗಿ ಈ ಘಟನೆ ನಡೆದಿದೆ.

ಆದರೆ, ಹೆದರಿಕೆ ಹುಟ್ಟಿಸಲು ಈ ಕೃತ್ಯ ಎಸಗಲಾಗಿದೆ ಎಂದು ವಕೀಲರು ಹೇಳುತ್ತಿದ್ದಾರೆ ಎಂದು ಕರ್ನಲ್‌ಗಂಜ್ ಪೊಲೀಸ್ ಠಾಣಾಧಿಕಾರಿ ರಾಮ ಮೋಹನ್ ರಾಯ್ ತಿಳಿಸಿದ್ದಾರೆ.

# ನಾಗರಾಜ್ ಲೋಕಿಕೆರೆ ಮತಯಾಚನೆ



ದಾವಣಗೆರೆ, ಏ. 18 - ಸಮಾಜ ಸೇವಕರು, ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷರೂ ಆದ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ನಾಗರಾಜ್ ಲೋಕಿಕೆರೆ ಅವರು ತಾವು ಸ್ಪರ್ಧಿಸಿರುವ ಕ್ಷೇತ್ರ ವ್ಯಾಪ್ತಿಯಲ್ಲಿ ಮತದಾರರ ಬೆಂಬಲ ಪಡೆಯಲು ಬಿರುಸಿನ ಪ್ರಚಾರ ನಡೆಸುತ್ತಿದ್ದಾರೆ.

ಸಿದ್ದವೀರಪ್ಪ ಬಡಾವಣೆ, ಕುವೆಂಪು ನಗರ, ನಿಜಲಿಂಗಪ್ಪ ಬಡಾವಣೆ, 36ನೇ ವಾರ್ಡ್ ನ ನಿಟ್ಟುವಳ್ಳಿ ಸೇರಿದಂತೆ ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಂಚರಿಸಿ, ಜನರ ಅಹವಾಲುಗಳನ್ನು ಆಲಿಸುವುದರ ಜೊತೆಗೆ ತಮ್ಮ ಸೇವೆಗೆ ಸದಾವಕಾಶವನ್ನು ನೀಡುವಂತೆ ಕ್ಷೇತ್ರದ ಮತದಾರರಲ್ಲಿ ಮನವಿ ಮಾಡಿದರು.

# ಹರಿಹರ : ನಂದಿಗಾವಿ ಶ್ರೀನಿವಾಸ್‌ಗೆ ಕಾಂಗ್ರೆಸ್ ಟಿಕೆಟ್

## ಶಾಸಕ ರಾಮಪ್ಪ ಅವರಿಗೆ ಕೈ ತಪ್ಪಿದ ಟಿಕೆಟ್ : ಅಭಿಮಾನಿಗಳಲ್ಲಿ ತೀವ್ರ ಬೇಸರ



ಮಲೇಬೆನ್ನೂರು, ಏ.18- ಕೊನೆಗೂ ಹರಿಹರ ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿ ಘೋಷಣೆಯಾಗಿದ್ದು, ನಂದಿಗಾವಿ ಶ್ರೀನಿವಾಸ್ ಅವರಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಿದೆ.

ಕಾಂಗ್ರೆಸ್ ಪಕ್ಷ ಮಂಗಳವಾರ ರಾತ್ರಿ ಬಿಡುಗಡೆ ಮಾಡಿರುವ 4ನೇ ಪಟ್ಟಿಯಲ್ಲಿ ನಂದಿಗಾವಿ ಶ್ರೀನಿವಾಸ್ ಅವರ ಹೆಸರನ್ನು ಹರಿಹರಕ್ಕೆ ಘೋಷಣೆ ಮಾಡಿದ್ದು, ಇದರಿಂದ ಕಳೆದ 15 ದಿನಗಳಿಂದ ತೀವ್ರ ಕುತೂಹಲ ಮೂಡಿಸಿದ್ದ ಹರಿಹರ ಕ್ಷೇತ್ರದ ಕಾಂಗ್ರೆಸ್ ಟಿಕೆಟ್‌ಗೆ ತೆರೆ ಬಿದ್ದಂತಾಯಿತು.

ಸ್ವಾಮೀಜಿಯೊಬ್ಬರ ಒತ್ತಡಕ್ಕೆ ಮಣಿದು ನಂದಿಗಾವಿ ಶ್ರೀನಿವಾಸ್ ಅವರಿಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಿದ ಎನ್ನಲಾಗಿದೆ.

ಕಾಂಗ್ರೆಸ್ ಟಿಕೆಟ್‌ಗಾಗಿ ಕೊನೆಯ ಕ್ಷಣದವರೆಗೂ ಪ್ರಯತ್ನ ನಡೆಸಿದ ಶಾಸಕ ಎಸ್. ರಾಮಪ್ಪ ಅವರಿಗೆ ನಿರೀಕ್ಷೆಯಂತೆಯೇ ಟಿಕೆಟ್ ತಪ್ಪಿಸಲಾಗಿದೆ. ಇದರಿಂದಾಗಿ ರಾಮಪ್ಪ ಅವರ ಅಭಿಮಾನಿಗಳಿಗೆ ತೀವ್ರ ನಿರಾಸೆ ಉಂಟಾಗಿದೆ.

ಜಿ.ಪಂ. ಮಾಜಿ ಸದಸ್ಯರೂ ಆದ ವಕೀಲ ಎಂ.ನಾಗೇಂದ್ರಪ್ಪ ಅವರೂ ಕೂಡಾ ಕಾಂಗ್ರೆಸ್ ಟಿಕೆಟ್‌ಗಾಗಿ ಪ್ರಬಲ ಆಕಾಂಕ್ಷಿಯಾಗಿದ್ದರು. ಅವರಿಗೆ ಈ ಬಾರಿಯೂ ಟಿಕೆಟ್ ಮಿಸ್ ಆಗಿರುವುದು ಅವರ ಅಭಿಮಾನಿಗಳಲ್ಲೂ ಬೇಸರ ತಂದಿದೆ.

ನಾಗೇಂದ್ರಪ್ಪ ಅವರು 2013 ಮತ್ತು 2018ರ ವಿಧಾನ ಸಭಾ ಚುನಾವಣೆಗಳಲ್ಲೂ ಕಾಂಗ್ರೆಸ್ ಟಿಕೆಟ್‌ಗಾಗಿ ತೀವ್ರ ಪ್ರಯತ್ನ ನಡೆಸಿದ್ದರು.

ಹರಿಹರ ಕ್ಷೇತ್ರದ ಕಾಂಗ್ರೆಸ್ ಟಿಕೆಟ್‌ಗಾಗಿ ಶಾಸಕ ಎಸ್.ರಾಮಪ್ಪ, ಎಂ.ನಾಗೇಂದ್ರಪ್ಪ, ನಂದಿಗಾವಿ ಶ್ರೀನಿವಾಸ್, ಡಾ. ಹೆಚ್.ಮಹೇಶಪ್ಪ, ನಂದಿಗಾವಿ ಗೋವಿಂದರೆಡ್ಡಿ, ಕುಣೆಬೆಳಕೆರೆ ದೇವೇಂದ್ರಪ್ಪ, ನಿಖಿಲ್ ಕೊಂಡಜ್ಜಿ, ಕೃಷ್ಣ ಸಾ ಭೂತೆ, ಎಂ.ಎಸ್.ಬಾಬುಲಾಲ್ ಸೇರಿ ಒಟ್ಟು 9 ಜನ ಆಕಾಂಕ್ಷಿಗಳಾಗಿದ್ದರು.

ನಂದಿಗಾವಿ ಶ್ರೀನಿವಾಸ್ ಅವರಿಗೆ ಟಿಕೆಟ್ ಸಿಕ್ಕಿರುವ ಹಿನ್ನೆಲೆಯಲ್ಲಿ ಶಾಸಕ ರಾಮಪ್ಪ, ಜಿ.ಪಂ. ಮಾಜಿ ಸದಸ್ಯ ಎಂ.ನಾಗೇಂದ್ರಪ್ಪ ಸೇರಿದಂತೆ ಉಳಿದ 8 ಆಕಾಂಕ್ಷಿಗಳು ಮುಂದೆ ಯಾವ ತೀರ್ಮಾನ ಕೈಗೊಳ್ಳುತ್ತಾರೋ ಎಂಬುದನ್ನು ಕಾದು ನೋಡಬೇಕಿದೆ.

**IN THE COURT OF HON'BLE SENIOR CIVIL JUDGE AT HARAPANAHALLI**

C.Misc. No. 03/2021

**PETITIONER :** NAGARAJ H.K. Late H. Karibasappa, Aged about 51 years, Occ: Medical representative, R/at No. 987/2, 2nd Main, 3rd Cross, Vinobha Nagar, RMC Complex, Davangere -577006

**V/S**

**RESPONDANTS :** P.T. Shivaji Naik S/o. Thavarya Naik, Aged about 48 years, Occ: Agriculture, R/at Lakshmipura Village, Harapanahalli Taluk, and 4 others.

**NOTICE/SUMMONS TO RESPONDEN NO. 3, 4 AND 5 UNDER ORDER V RULE 20 OF CIVIL PROCEDURE CODE 1908 BY WAY OF PAPER PUBLICATION**

**RESPONDANTS No. 3 :** H.K. Karuna, d/o. Late. Karibasappa MCC `A' Block, Davangere.
**RESPONDANTS No. 4 :** Smt. H.K. Siddaganga d/o. Late. Karibasappa, M.C.C. 'A' Block, Davangere.
**RESPONDANTS No. 5 :** Siddesh H.K. S/o. Late. Karibasappa, Ramakrishna Ashrama, Davangere.

Whereas, the petitioner has filed the above case to recall the Order in R.A.No.23/2019 dated 18-01-2021 in this court and to re-admit the appeal and giving an opportunity for the petitioner to hear/agree in the appeal.
The notice of the above case was not served on the respondents No. 3, 4 and 5 which were sent through court as well as RPAD. But all of you purposefully evaded the same. Hence this advertisement in News paper.
You are hereby called upon to attend the Court on 26/06/23 at 11.00 am by personally or duly authorized advocate to answer the above said case. In default of your appearance on the date and time, the case will be heard and determined in your absence.
Given under my hand and Seal of the Court on 13th day of April 2023.

**Advocate for Petitioner (Rashmi H.K.) Davanagere.**

**By order of the Court Shirastedar Senior Civil Judge, Harapanahalli.**

**ಶ್ರೀಮತಿ ಜೊಳ್ಳಿ ವಾಣಿ ನಿಧನ**



ದಾವಣಗೆರೆ ಪಿ.ಜೆ. ಬಡಾವಣೆ, ಚೇತನ ಹೋಟೆಲ್ ರೋಡ್, 6ನೇ ಮೇನ್, 7ನೇ ಕ್ರಾಸ್ ವಾಸಿ, ಜೊಳ್ಳಿ ಸದಾಶಿವರಾಜ್ ಅವರ ದ್ವಿತೀಯ ಪುತ್ರ, ಜೊಳ್ಳಿ ರಾಜು ಜೆ.ಎಸ್. ಅವರ ಪತ್ನಿ ಶ್ರೀಮತಿ ಜೊಳ್ಳಿ ವಾಣಿ (40) ಅವರು ದಿನಾಂಕ 18-4-2023ರ ಮಂಗಳವಾರ ರಾತ್ರಿ 9.35ಕ್ಕೆ ನಿಧನರಾದರು. ಪತಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19-4-2023ರ ಬುಧವಾರ ಮಧ್ಯಾಹ್ನ 12 ಕ್ಕೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಲಿದೆ.

# ಸಂತೋಷ್ ಕಾರಣದಿಂದ ಹಿರಿಯರು ಮೂಲೆಗುಂಪು



**ಶೆಟ್ಟರ್ ಆರೋಪ**

ಬೆಂಗಳೂರು, ಏ. 18 - ವಿಧಾನಸಭಾ ಚುನಾವಣೆ ಫಲಿತಾಂಶದ ನಂತರ ಪಕ್ಷ ಮತ್ತು ಸರ್ಕಾರವನ್ನು ಪೂರ್ಣವಾಗಿ ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್, ಹಿರಿಯರನ್ನು ಮೂಲೆಗುಂಪು ಮಾಡುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಆರೋಪಿಸಿದ್ದಾರೆ.

ಬಿಜೆಪಿ ತೊರೆದ ನಂತರ ಇಂದು ತುರ್ತು ಪತ್ರಿಕಾಗೋಷ್ಠಿ ನಡೆಸಿ, ಪ್ರಸಕ್ತ ಚುನಾವಣೆಯಲ್ಲಿ ತಮ್ಮ ಬೆಂಬಲಿಗರಿಗೆ ಹೆಚ್ಚಿನ ಟಿಕೆಟ್ ಕೊಡಿಸಲು ಪಕ್ಷ ಸಂಘಟನೆ ಮಾಡಿದವರನ್ನು ಕಸಕ್ಕಿಂತ ಕಡೆಯಾಗಿ ಕಂಡಿದ್ದಾರೆ ಎಂದು ಹರಿಹಾಯ್ದರು.

ನನಗೆ, ರಾಮದಾಸ್ ಸೇರಿದಂತೆ ಹಲವು ನಿಷ್ಠಾವಂತರಿಗೆ ಟಿಕೆಟ್ ತಪ್ಪಲು ಸಂತೋಷ್ ಕಾರಣ. ತಮ್ಮ ದೂರ ದೃಷ್ಟಿ ಯನ್ನು ಮುಂದಿಟ್ಟುಕೊಂಡು ರಾಜ್ಯ ಬಿಜೆಪಿಯ ಬುಡವನ್ನೇ ಅಲ್ಲಾಡಿಸುತ್ತಿದ್ದಾರೆ. ಇವರ ತಂತ್ರಗಾರಿಕೆಯ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಮತ್ತು ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಅವರ ಗಮನಕ್ಕೂ ತಂದಿದ್ದೆ. ಆದರೆ ಅವರು ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ ಎಂದರು.

ಸಂತೋಷ್ ಮಾತಿಗೆ ಬೆಲೆ ಕೊಟ್ಟು ಉತ್ತರ ಕರ್ನಾಟಕದಲ್ಲಿದ್ದ ಬಲಿಷ್ಠ ಬಿಜೆಪಿ ನೆಲೆಯನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ದೂರಿದರು. ತಮ್ಮವರಿಗೆ ತಮ್ಮ ಬೆಂಬಲಿಗರಿಗೆ ಟಿಕೆಟ್ ಕೊಡಿಸಬೇಕೆಂದು ನಿರ್ಧಾರ ಮಾಡಿದರೆ, ಸಂತೋಷ್ ಎಂತಹ ನಾಯಕರ ಬುಡವನ್ನೇ ಕತ್ತರಿಸಿ ಹಾಕುತ್ತಾರೆ. ದೂರ ದೃಷ್ಟಿಯನ್ನಿಟ್ಟುಕೊಂಡು ಇಡೀ ಪಕ್ಷವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ತಮ್ಮ ಬೆಂಬಲಿತ ಹೊಸ ಮುಖಗಳನ್ನು ಪರಿಚಯಿಸುವ ಕೆಲಸ ಮಾಡಿದ್ದಾರೆ ಎಂದರು. ಇದರಿಂದ ಚುನಾವಣೆಯಲ್ಲಿ ಬಿಜೆಪಿಗೆ ಲಾಭಕ್ಕಿಂತ ನಷ್ಟವೇ ಹೆಚ್ಚು ಎಂದು ನಿನ್ನೆಯಷ್ಟೇ ಕಾಂಗ್ರೆಸ್ ಸೇರಿದ ಶೆಟ್ಟರ್, ಸಂತೋಷ್ ವಿರುದ್ಧ ಹರಿಹಾಯ್ದರು.

ಸಂತೋಷ್ ಸಲಹೆಯನ್ನೇ ವರಿಷ್ಠರು ಮಾನ್ಯ ಮಾಡಿ, ರಾಜ್ಯ ಬಿಜೆಪಿ ಹಿರಿಯರನ್ನು ಮೂಲೆಗುಂಪು ಮಾಡುವುದಿರಲಿ, ಯಾವ ರೀತಿ ನಡೆದುಕೊಳ್ಳುತ್ತಾರೆ ಎಂಬುದಕ್ಕೆ ನಾನೇ ಅದಕ್ಕೆ ಸಾಕ್ಷಿ ಎಂದರು.

ಧರ್ಮೇಂದ್ರ ಪ್ರಧಾನ್ ನನಗೆ ಫೋನ್ ಮಾಡಿ ಟಿಕೆಟ್ ಕೊಡಲ್ಲ ಅಂತಾರೆ. ಒಂದು ಫಾರ್ಮೆಟ್ ಕಳಿಸ್ತೇವೆ. ಅದಕ್ಕೆ ಸಹಿ ಹಾಕಿ ಕಳಿಸಿ ಅಂದರು. ಚಿಕ್ಕ ಹುಡುಗನಿಗೆ ಹೇಳಿದಂತೆ ಟಿಕೆಟ್ ಇಲ್ಲ ಎಂದು ಹೇಳಿ ನನಗೆ ಅಪಮಾನ ಮಾಡಿದ್ರು. ಒಬಿಡಿಯಂಟ್ ಇದಾರೆ, ಸುಮ್ಮನೇ ಒಪ್ಪಿಕೊಳ್ತಾರೆ ಅಂತಾ ಲೆಕ್ಕ ಹಾಕಿದರು. ಇದು ಟಿಕೆಟ್ ಪ್ರಶ್ನೆಯಲ್ಲ. ನನ್ನ ಮರ್ಯಾದೆ ಪ್ರಶ್ನೆ. ಪಕ್ಷ ಕಟ್ಟಿದವರನ್ನು ಒದ್ದು ಹೊರಗೆ ಹಾಕೋದು ಅಂದ್ರೇನು? ಎಂದು ಶೆಟ್ಟರ್ ಪ್ರಶ್ನಿಸಿದರು.

ಒಂದೊಂದೇ ಸೀಟನ್ನು ಬಿಜೆಪಿ ಕಳೆದುಕೊಳ್ಳುತ್ತಿದೆ. ಬಿಜೆಪಿ ಅಧಿಕಾರಕ್ಕೆ ಬರಬೇಕೋ, ಬೇಡವೋ ಅನ್ನೋ ಪ್ರಶ್ನೆ ಕಾಡ್ತಾ ಇದೆ. ಇದೇ ಸಂತೋಷ್ ಅವರನ್ನು ಬೇರೆ ರಾಜ್ಯಗಳಲ್ಲಿ ಉಸ್ತುವಾರಿ ಮಾಡಿದರು. ಎಲ್ಲಿಯೂ ಬಿಜೆಪಿ ನಿರೀಕ್ಷಿತ ಸೀಟು ಗೆಲ್ಲಲಿಲ್ಲ. ಇಷ್ಟೆಲ್ಲಾ ಆದರೂ ಕರ್ನಾಟಕದ ಉಸ್ತುವಾರಿ ನೀಡಿದ್ದಾರೆ. ಪಕ್ಷ ಹಾಳು ಮಾಡಲಿಕ್ಕೆಂದೇ ಈ ರೀತಿ ಮಾಡಿದ್ದಾರೆ ಎಂದರು.

# ಸಲಿಂಗ ಮದುವೆ : ವಿಶೇಷ ಮದುವೆ ಕಾಯ್ದೆ ಬಗ್ಗೆ ಮಾತ್ರ ವಾದ ಆಲಿಸುತ್ತೇವೆ

## ಮಹಿಳೆ ಹಾಗೂ ಪುರುಷ ಎಂಬುದು ಜನನಾಂಗಗಳಿಂದ ನಿರ್ಧಾರವಾಗುವುದಿಲ್ಲ ಎಂದ ಸುಪ್ರೀಂ ಕೋರ್ಟ್ ಪೀಠ

ನವದೆಹಲಿ, ಏ. 18 - ಸಲಿಂಗ ವಿವಾಹಕ್ಕೆ ಸಂಬಂಧಿಸಿದಂತೆ ವೈಯಕ್ತಿಕ ಕಾನೂನುಗಳ ಬಗ್ಗೆ ಪರಿಶೀಲಿಸುವುದಿಲ್ಲ. ವಿಶೇಷ ಮದುವೆ ಕಾಯ್ದೆಯ ಬಗ್ಗೆ ಮಾತ್ರ ವಾದ ಆಲಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ಸಲಿಂಗ ಮದುವೆಗೆ ಮಾನ್ಯತೆ ನೀಡಬೇಕು ಎಂದು ದಾಖಲಾಗಿರುವ ಅರ್ಜಿಗಳ ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಐವರು ಸದಸ್ಯರ ಸಂವಿಧಾನಿಕ ಪೀಠ, ಈ ವಿಷಯ ಸಂಕೀರ್ಣವಾಗಿದೆ. ವಿಶೇಷ ವಿವಾಹ ಕಾಯ್ದೆಯಲ್ಲಿ ಪುರುಷ ಹಾಗೂ ಮಹಿಳೆ ಎಂದು ಹೇಳಿರುವುದು ಸಂಪೂರ್ಣ ಜನನಾಂಗಗಳ ಆಧರಿತವಲ್ಲ ಎಂದು ಹೇಳಿದೆ.

ವ್ಯಕ್ತಿಗಳ ಜನನಾಂಗ ಯಾವುದು ಎಂಬುದು ಮುಖ್ಯವಲ್ಲ. ಈ ವಿಷಯ ಹೆಚ್ಚು ಸಂಕೀರ್ಣವಾಗಿರುವುದು ಪ್ರಮುಖ ವಿಷಯವಾಗಿದೆ ಎಂದು ಪೀಠ ತಿಳಿಸಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್, ಎಸ್.ಆರ್.ಭಟ್, ಹಿಮಾ ಕೊಹ್ಲಿ ಹಾಗೂ ಪಿ.ಎಸ್. ನರಸಿಂಹ ಅವರಿದ್ದಾರೆ. ಧರ್ಮಗಳ ವೈಯಕ್ತಿಕ ಕಾನೂನುಗಳಲ್ಲಿ ಇರುವ ತೊಡಕುಗಳು ಹಾಗೂ ಪರಿಣಾಮಗಳ ಕುರಿತು ನ್ಯಾಯಾಲಯದ ಗಮನಕ್ಕೆ ತರಲಾಯಿತು.

ಆಗ ಪ್ರತಿಕ್ರಿಯಿಸಿದ ಪೀಠ, ವೈಯಕ್ತಿಕ ಕಾನೂನುಗಳನ್ನು ಹೊರಗಿಡಬಹುದು. ವಕೀಲರು ವಿಶೇಷ ವಿವಾಹ ಕಾಯ್ದೆ ಬಗ್ಗೆ ಮಾತ್ರ ವಾದ ಮಂಡಿಸಬಹುದು ಎಂದು ತಿಳಿಸಿತು.

1954ರಲ್ಲಿ ವಿಶೇಷ ವಿವಾಹ ಕಾಯ್ದೆ ಜಾರಿಗೆ ತರಲಾಗಿತ್ತು. ಈ ಕಾಯ್ದೆಯ ಅನ್ವಯ ಎಲ್ಲ ಧರ್ಮದವರು ಮದುವೆಯಾಗಿ ಏಕರೂಪದ ಕಾಯ್ದೆಗೆ ಒಳಪಡುತ್ತಾರೆ.



ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ, ತೃತೀಯ ಲಿಂಗಿಗಳ ಕುರಿತು ಹಲವಾರು ಕಾಯ್ದೆಗಳಿವೆ. ಅವರಿಗೆ ಹಲವಾರು ಹಕ್ಕುಗಳನ್ನು ನೀಡಲಾಗಿದೆ. ಪಕ್ಷಪಾತ ಮಾಡುವುದನ್ನು ನಿಷೇಧಿಸಲಾಗಿದೆ ಎಂದರು. ಆದರೆ, ನ್ಯಾಯಿಕ ನಿರ್ಧಾರದ ಮೂಲಕ ಮದುವೆಯ ಸಾಮಾಜಿಕ - ಕಾನೂನು ಸ್ಥಾನ ನೀಡಲಾಗದು. ಶಾಸನದ ಮೂಲಕವೂ ಇದು ಸಾಧ್ಯವಿಲ್ಲ. ಸಮಾಜದ ಮೂಲಕ ಇದರ ಸ್ವೀಕಾರ ಸಾಧ್ಯ ಎಂದರು. ಹಿಂದೂ ವ್ಯಕ್ತಿಯೋರ್ವ, ಹಿಂದೂ ಆಗಿದ್ದುಕೊಂಡೇ ಸಲಿಂಗ ಮದುವೆಯಾಗುವ ಮೂಲಕ ಹಿಂದೂ ಹಕ್ಕುಗಳನ್ನು ಉಳಿಸಿಕೊಳ್ಳಬೇಕು ಎಂದು ಬಯಸಿದಾಗ ಸಮಸ್ಯೆ ಎದುರಾಗುತ್ತದೆ ಎಂದು ಮೆಹ್ತ ಹೇಳಿದರು.

ಹಿಂದೂಗಳು ಹಾಗೂ ಮುಸ್ಲಿಮರು ಸೇರಿದಂತೆ ಇತರೆ ಸಮುದಾಯಗಳ ಮೇಲೆ ಪರಿಣಾಮವಾಗಲಿದೆ. ಹೀಗಾಗಿ ಈ ವಿಷಯದಲ್ಲಿ ರಾಜ್ಯಗಳ ನಿಲುವು ಪಡೆಯಬೇಕಿದೆ ಎಂದರು.

ಈ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ ಪೀಠ, ನಾವು ವೈಯಕ್ತಿಕ ಕಾನೂನುಗಳ ಬಗ್ಗೆ ಮಧ್ಯ ಪ್ರವೇಶಿಸುವುದಿಲ್ಲ. ಹೀಗಿರುವಾಗ ಈ ವಿಷಯಗಳ ಪ್ರಸ್ತಾಪಿಸುವ ಅಗತ್ಯವಿಲ್ಲ. ನಾವು ಎಲ್ಲವನ್ನೂ ಆಲಿಸಬೇಕು ಎಂದು ಹೇಳಲಾಗದು ಎಂದು ತಿಳಿಸಿತು. ಆದರೆ, ಹೀಗೆ ಹೇಳುವುದಾದರೆ ವಿಷಯವನ್ನು ಅರೆಬರೆಯಾಗಿ ಬಿಟ್ಟಂತೆ. ಕೇಂದ್ರದ ನಿಲುವು ಕೇಳಿದಂತಾಗುವುದಿಲ್ಲ ಎಂದು ಮೆಹ್ತ ಹೇಳಿದರು.

ಅದಕ್ಕೆ ಉತ್ತರಿಸಿದ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್, ನಾವು ಮಧ್ಯದ ಮಾರ್ಗ ಹಿಡಿಯುತ್ತೇವೆ. ಒಂದು ವಿಷಯ ನಿರ್ಧರಿಸಬೇಕಾದರೆ ಎಲ್ಲವನ್ನೂ ನಿರ್ಧರಿಸಬೇಕಿಲ್ಲ ಎಂದರು. ಧರ್ಮ ತಟಸ್ಥವಾದ ವಿಶೇಷ ವಿವಾಹ ಕಾಯ್ದೆಯಲ್ಲೂ ಪುರುಷ ಹಾಗೂ ಮಹಿಳೆ ಎಂಬ ಪ್ರಸ್ತಾಪವಿದೆ ಎಂದು ಮೆಹ್ತ ಹೇಳಿದರು.

ಈ ಪದಗಳು ವ್ಯಕ್ತಿಗಳ ಜನನಾಂಗಕ್ಕೆ ಸಂಬಂಧಿಸಿದವುಗಳಲ್ಲ ಎಂದು ನ್ಯಾಯಾಲಯ ಅಭಿಪ್ರಾಯ ಪಟ್ಟಿತು. ಮುಂದುವರೆದು ವಾದ ಮಂಡಿಸಿದ ಮೆಹ್ತ, ಈ ಪದಗಳು ಜನನಾಂಗಕ್ಕೆ ಸಂಬಂಧಿಸಿದವು. ಸಲಿಂಗ ಮದುವೆಗೆ ಕಾನೂನು ಮಾನ್ಯತೆ ನೀಡುವುದಾದರೆ, ಹಲವಾರು ಕಾಯ್ದೆಗಳು ನಿಷ್ಕ್ರಿಯವಾಗುತ್ತವೆ ಎಂದು ಹೇಳಿದರು.

ಮಹಿಳೆಯನ್ನು ನಿರ್ದಿಷ್ಟ ಸಮಯದ ನಂತರ ವಿಚಾರಣೆಗೆ ಕರೆಯಬಾರದು ಎಂಬ ಕಾಯ್ದೆ ಇದೆ. ಆಗ ವ್ಯಕ್ತಿಯೋರ್ವ ತಾನು ಪುರುಷನ ಜನನಾಂಗ ಹೊಂದಿದ್ದರೂ, ಪುರುಷನಲ್ಲ ಎಂದು ಹೇಳಬಹುದು ಎಂದು ಮೆಹ್ತ ವಾದ ಮಂಡಿಸಿದರು.

ನ್ಯಾಯಾಲಯ ತಾನು ವೈಯಕ್ತಿಕ ಕಾನೂನುಗಳಿಗೆ ಹೋಗುವುದಿಲ್ಲ ಎಂದು ಹೇಳಬಹುದು. ಆದರೆ, ಹಿಂದಿನ ತೀರ್ಪುಗಳ ಕಾರಣದಿಂದ ವೈಯಕ್ತಿಕ ಕಾನೂನುಗಳ ಕುರಿತ ಕಿಟಕಿ ತೆರೆದಿದೆ. ಮತ್ತೊಮ್ಮೆ ಮತ್ತೊಂದು ಕಿಟಕಿ ತೆರೆಯಬಹುದು ಎಂದರು. ಈ ಹಿನ್ನೆಲೆಯಲ್ಲಿ, ಸಲಿಂಗ ಮದುವೆಯ ವಿಷಯದ ಬಗ್ಗೆ ನ್ಯಾಯಾಲಯ ನಿರ್ಧರಿಸಬೇಕೋ ಅಥವಾ ಈ ವಿಷಯ ಸಂಸತ್ತಿಗೆ ಬಿಡಬೇಕೋ ಎಂಬುದು ಮೊದಲು ಇತ್ಯರ್ಥವಾಗಬೇಕಿದೆ ಎಂದು ಹೇಳಿದರು.

ಕೇಂದ್ರದ ನಿಲುವನ್ನು ಬೆಂಬಲಿಸಿದ ಹಿರಿಯ ವಕೀಲ ರಾಕೇಶ್ ದ್ವಿವೇದಿ, ಸಲಿಂಗ ವಿವಾಹಕ್ಕೆ ಸಂಬಂಧಿಸಿದಂತೆ ಎಲ್ಲಾ ರಾಜ್ಯಗಳ ನಿಲುವನ್ನು ತಿಳಿಯಬೇಕಿದೆ ಎಂದರು.

ಜಮೀಯತ್ ಉಲಾಮಾ ಎ ಹಿಂದ್ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಾಲ್, ಸುಪ್ರೀಂ ಕೋರ್ಟ್ ಸಮಗ್ರವಾಗಿ ವಿಚಾರಣೆ ನಡೆಸಬೇಕು. ಅರೆಬರೆಯಾಗಿ ವಿಚಾರಣೆ ನಡೆಸುವುದರಿಂದ ಒಳಿತಿಗಿಂತ ಕೆಡುಕೇ ಹೆಚ್ಚಾಗುತ್ತದೆ ಎಂದು ಹೇಳಿದರು. ಸಲಿಂಗ ಮದುವೆ ಮುರಿದು ಬಿದ್ದಾಗ ಯಾರು ಅಪ್ಪ ಹಾಗೂ ಯಾರು ಅಮ್ಮ? ಎಂಬ ಪ್ರಶ್ನೆ ಬರುತ್ತದೆ. ಮಗುವಿನ ಕಾಳಜಿ ನೋಡಿಕೊಳ್ಳುವವರು ಯಾರು ಎಂಬ ಪ್ರಶ್ನೆ ಬರುತ್ತದೆ ಎಂದರು.

ಇತರೆ ಕೆಲ ದೇಶಗಳ ಉದಾಹರಣೆ ನೀಡಿದ ಸಿಬಾಲ್, ಆ ದೇಶಗಳು ಎಲ್ಲಾ ಇತರೆ ಕಾಯ್ದೆಗಳ ಸುಧಾರಣೆ ಮಾಡಿವೆ. ನಾನು ಸಲಿಂಗ ವಿವಾಹದ ಪರವಾಗಿದ್ದೇನೆ. ಆದರೆ, ಈ ರೀತಿಯ ಅನುಮತಿಗೆ ಆಕ್ಷೇಪವಿದೆ ಎಂದರು.

ಅರ್ಜಿದಾರರ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೊಹತಗಿ, ದ್ವಿಲಿಂಗ ಮದುವೆಗಳ ರೀತಿಯಲ್ಲೇ ಸಲಿಂಗ ಮದುವೆಗೆ ಹಕ್ಕು ನೀಡಬೇಕು. ಇದು ಮೂಲಭೂತ ಹಕ್ಕುಗಳನ್ನು ಆಧರಿಸಿದ ವಿಷಯವಾಗಿದೆ ಎಂದರು.

ಈ ಹಂತದಲ್ಲಿ ಮಾತನಾಡಿದ ಪೀಠ, ನಾವು ಕಾಯ್ದೆ ವ್ಯಾಖ್ಯಾನಿಸುವ ಅಧಿಕಾರವನ್ನು ಬಳಸಬೇಕಿದೆ. ಕಾನೂನುಗಳು ಬೆಳವಣಿಗೆಯಾಗುತ್ತಿರುತ್ತವೆ. ನ್ಯಾಯಾಲಯಗಳು ವ್ಯಾಖ್ಯಾನದ ರೂಪದಲ್ಲೇ ಕ್ರಮ ತೆಗೆದುಕೊಳ್ಳಬೇಕಿದೆ. ಇದು ಹಂತ ಹಂತವಾಗಿ ಬರಬೇಕಿದೆ ಎಂದು ತಿಳಿಸಿತು.

> **ಹಿಂದೂ ವ್ಯಕ್ತಿಯೋರ್ವ, ಹಿಂದೂ ಆಗಿದ್ದುಕೊಂಡೇ ಸಲಿಂಗ ಮದುವೆಯಾಗುವ ಮೂಲಕ ಹಿಂದೂ ಹಕ್ಕುಗಳನ್ನು ಉಳಿಸಿಕೊಳ್ಳಬೇಕು ಎಂದು ಬಯಸಿದಾಗ ಸಮಸ್ಯೆ ಎದುರಾಗುತ್ತದೆ.**
> **- ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ**

> **ಸಲಿಂಗ ಮದುವೆ ಮುರಿದು ಬಿದ್ದಾಗ ಯಾರು ಅಪ್ಪ ಹಾಗೂ ಯಾರು ಅಮ್ಮ ಎಂಬ ಪ್ರಶ್ನೆ ಬರುತ್ತದೆ. ಮಗುವಿನ ಕಾಳಜಿ ನೋಡಿಕೊಳ್ಳುವವರು ಯಾರು ಎಂಬ ಪ್ರಶ್ನೆ ಬರುತ್ತದೆ.**
> **- ಹಿರಿಯ ವಕೀಲ ಕಪಿಲ್ ಸಿಬಾಲ್**

> **ದ್ವಿಲಿಂಗ ಮದುವೆಗಳ ರೀತಿಯಲ್ಲೇ ಸಲಿಂಗ ಮದುವೆಗೆ ಹಕ್ಕು ನೀಡಬೇಕು. ಇದು ಮೂಲಭೂತ ಹಕ್ಕುಗಳನ್ನು ಆಧರಿಸಿದ ವಿಷಯವಾಗಿದೆ.**
> **- ಹಿರಿಯ ವಕೀಲ ಮುಕುಲ್ ರೊಹತಗಿ**

# ಸ್ಥಗಿತಗೊಂಡ ಅಭಿವೃದ್ಧಿ ಕಾರ್ಯ ಮುಂದುವರೆಸಲು ಮತ ನೀಡಿ

## ಎಸ್ಸೆಸ್ಸೆಂರಿಂದ ಹಳೇಬಾತಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ಪ್ರಚಾರ

ದಾವಣಗೆರೆ, ಏ. 18- ಕಳೆದ ಐದು ವರ್ಷಗಳಿಂದ ಕ್ಷೇತ್ರದಲ್ಲಿ ನಿಂತಿರುವ ಅಭಿವೃದ್ಧಿ ಕಾರ್ಯಗಳನ್ನು ಮುಂದುವರೆಸಲು ನನಗೆ ಅತಿ ಹೆಚ್ಚಿನ ಮತಗಳನ್ನು ನೀಡುವ ಮೂಲಕ ಬೆಂಬಲಿಸಬೇಕೆಂದು ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್ ಮಲ್ಲಿಕಾರ್ಜುನ್ ಮನವಿ ಮಾಡಿದರು.

ಹಳೇಬಾತಿ, ಗುಡ್ಡದ ಕ್ಯಾಂಪ್, ನೀಲಾನಹಳ್ಳಿ ಹಾಗೂ ದೊಡ್ಡಬಾತಿ ಗ್ರಾಮಗಳಲ್ಲಿ ಚುನಾವಣಾ ಪ್ರಚಾರ ನಡೆಸುವ ವೇಳೆ ಅವರು ಮಾತನಾಡಿದರು.

ಇದಕ್ಕೂ ಮುನ್ನ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ವಿಭಾಗದಲ್ಲಿ ಚುನಾವಣಾ ಪ್ರಚಾರವನ್ನು ಹಳೇಬಾತಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ಎಸ್.ಎಸ್. ಮಲ್ಲಿಕಾರ್ಜುನ್ ಪ್ರಾರಂಭಿಸಿದರು.

ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ಅಭಿಮಾನಿಗಳ ನಡುವೆ ಗುಡ್ಡದ ಕ್ಯಾಂಪ್ ನಾಗರಿಕರು ಮಲ್ಲಿಕಾರ್ಜುನ್ ಅವರನ್ನು ಪುಷ್ಪಾರ್ಚನೆ ಮಾಡಿ ಸ್ವಾಗತಿಸಿದರು.



ನನ್ನ ಅವಧಿಯ ಐದು ವರ್ಷಗಳ ಕಾಮಗಾರಿಗಳು ಹಾಗೂ ಈಗಿನ ಬಿಜೆಪಿ ಸರ್ಕಾರದ ಅವಧಿಯ ಕಾಮಗಾರಿಗಳ ಬಗ್ಗೆ ಯೋಚಿಸಿ, ಚರ್ಚಿಸಿ ನನಗೆ ಮತ ನೀಡಿ ಎಂದು ಗ್ರಾಮಸ್ಥರಿಗೆ ಮನವಿ ಮಾಡಿದ ಮಲ್ಲಿಕಾರ್ಜುನ್, ಬಡವರಿಗೆ ಅನುಕೂಲವಾಗಲಿ ಎಂದು ಪ್ರತಿ ಪಂಚಾಯತಿಗೂ 400 ರಿಂದ 500 ಮನೆಗಳನ್ನು ತಮ್ಮ ಅವಧಿಯಲ್ಲಿ ಮಂಜೂರು ಮಾಡಿದ್ದು, ಈಗಿನ ಸರ್ಕಾರ ಬೆರಳೆಣಿಕೆಯಷ್ಟಾದರೂ ಮನೆಗಳನ್ನು ಮಂಜೂರು ಮಾಡಿದ್ದಾರೆಯೇ ಎಂದು ಕೇಳಿದ ಅವರು, ಭ್ರಷ್ಟಾಚಾರ ರಹಿತ, ಉತ್ತಮ ಆಡಳಿತಕ್ಕಾಗಿ ನನಗೆ ಅವಕಾಶ ನೀಡಿ ಎಂದು ಮನವಿ ಮಾಡಿದರು.

ಬೇತೂರು ಕರಿಬಸಪ್ಪ, ಮುದೇಗೌಡ್ರು ಗಿರೀಶ್, ಮಾಗಾನಹಳ್ಳಿ ಪರಶುರಾಮ್, ಶಾಮನೂರ್ ಟಿ. ಬಸವರಾಜ್, ಹದಡಿ ಹಾಲಪ್ಪ, ಕೆ.ಜಿ ಉಮೇಶ್, ಬೇತೂರು ಪ್ರಭಣ್ಣ, ಹಳೇಬಾತಿ, ಗುಡ್ಡದ ಕ್ಯಾಂಪ್, ನೀಲಾನಹಳ್ಳಿ ಗ್ರಾಮಸ್ಥರಾದ ಸಿದ್ದೇಶ್, ಶಾಂತಪ್ಪ, ಕೆಂಚಪ್ಪ, ಪಂಚಣ್ಣ, ಅಂಜಿನಪ್ಪ, ಶರಣಪ್ಪ, ಮಹದೇವ್, ಹನುಮಂತ, ಅಶೋಕ್, ಸತೀಶ್, ಶಿವಣ್ಣ, ವಿಶ್ವನಾಥ್, ದೊಡ್ಡಬಾತಿ ಗ್ರಾಮಸ್ಥರಾದ ಬಿ.ಜಿ ವಿಶ್ವಾಂಬರ, ಸಿದ್ದಲಿಂಗಪ್ಪ, ಜಿ.ಆರ್. ಷಣ್ಮುಖಪ್ಪ, ಅಪೂರ್ವ ರಾಜಣ್ಣ, ಆಂಜನೇಯ ಗುರೂಜಿ, ರವಿ, ಜಯಮ್ಮ, ಬಿ.ಕೆ. ಪ್ರಕಾಶ್, ಬಾತಿ ಶಿವಕುಮಾರ್, ಮುದಿಯಪ್ಪ, ಜೆಸಿಬಿ ಹನುಮಂತಪ್ಪ, ಪಿ.ಎ. ನಾಗರಾಜ್, ಬಸಣ್ಣ, ಬಿ. ಸುರೇಶ್ ಸೇರಿದಂತೆ ಸಾವಿರಾರು ಕಾರ್ಯಕರ್ತರು ಪ್ರಚಾರ ಕಾರ್ಯದಲ್ಲಿ ಭಾಗವಹಿಸಿದ್ದರು.

# ಪ್ರಕಾಶ ಕೋಳಿವಾಡ ನಾಮಪತ್ರ ಸಲ್ಲಿಕೆ




ರಾಣೇಬೆನ್ನೂರು, ಏ. 18- ರಾಣೇಬೆನ್ನೂರು ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿ ಪ್ರಕಾಶ ಕೋಳಿವಾಡ ಅವರಿಂದು ಬೃಹತ್ ಮೆರವಣಿಗೆ ಮೂಲಕ ತಹಶೀಲ್ದಾರ್ ಕಛೇರಿಗೆ ತೆರಳಿ ಚುನಾವಣಾಧಿಕಾರಿಗೆ ತಮ್ಮ ನಾಮಪತ್ರ ಸಲ್ಲಿಸಿದರು.

ಅಪಾರ ಸಂಖ್ಯೆಯ ಜನರ ಮೈಲುದ್ದದ ಮೆರವಣಿಗೆ ಎಪಿಎಂಸಿ ಗಣೇಶ ಗುಡಿಯಿಂದ ಹೊರಟು, ಪೋಸ್ಟ್ ಸರ್ಕಲ್ ಹಾಯ್ದು ಎಂಜಿ ರಸ್ತೆ ಮೂಲಕ ತಹಶೀಲ್ದಾರ್ ಕಛೇರಿ ತಲುಪಿತು.

ಪ್ರಕಾಶ ಕೋಳಿವಾಡ ಜೊತೆಗೆ ಪಕ್ಷದ ಟಿಕೆಟ್ ಆಕಾಂಕ್ಷಿಗಳಾದ ಜಟ್ಟೆಪ್ಪ ಕರೇಗೌಡ, ಕೃಷ್ಣಪ್ಪ ಕಂಬಳಿ, ಪಕ್ಷದ ಅಧ್ಯಕ್ಷ ಮಂಜನಗೌಡ ಪಾಟೀಲ, ಶೇರು ಕಾಬೂಲಿ, ಮಾಜಿ ಸಚಿವ ರುದ್ರಪ್ಪ ಲಮಾಣಿ ಮುಖಂಡರಾದ ಬಸನಗೌಡ ಮರದ, ಪುಟ್ಟಪ್ಪ ಮರಿಯಮ್ಮನವರ, ಮಧು ಕೋಳಿವಾಡ ಮತ್ತಿತರರಿದ್ದರು.

# ಬಿಜೆಪಿ ವಿರುದ್ಧ ಪ್ರತಿಪಕ್ಷಗಳ ಜಾತಿ ಅಸ್ತ್ರ

(1ನೇ ಪುಟದಿಂದ) ಕಾಂಗ್ರೆಸ್ ಪಕ್ಷ ಇತರೆ ಪ್ರಾಂತೀಯ ಪಕ್ಷ ಗಳ ಜೊತೆಗೂಡಿ ಈ ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪಿ ಸುವ ಸಾಧ್ಯತೆ ಇದೆ. ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ರಾಹುಲ್ ಗಾಂಧಿ ಭಾರತ್ ಜೋಡೋ ಪಾದಯಾತ್ರೆ ನಡೆಸುವ ವೇಳೆ ಹಲವಾರು ನಾಗರಿಕ ಸಮಾಜಗಳು ಜಾತಿ ಆಧರಿತ ಜನಗಣತಿಯ ಬಗ್ಗೆ ಒತ್ತಾಯಿಸಿದ್ದವು. ಕಾಂಗ್ರೆಸ್ ಈ ಬೇಡಿಕೆ ಯಲ್ಲಿ ಮುನ್ನಡೆಯುತ್ತಿದೆ ಎಂದಿದ್ದಾರೆ. 2012ರಲ್ಲಿ ದೇಶದ 25 ಕೋಟಿ ಮನೆಗಳಿಗೆ ಭೇಟಿ ನೀಡಿ ಸಾಮಾಜಿಕ - ಆರ್ಥಿಕ ಜಾತಿ ಗಣತಿ ನಡೆಸಲಾಗಿತ್ತು. ಆದರೆ, ಹಲವಾರು ಕಾರಣಗಳಿಂದಾಗಿ ಮಾಹಿತಿ ಪ್ರಕಟಿಸಿರಲಿಲ್ಲ ಎಂದವರು ಹೇಳಿದ್ದಾರೆ.

ಜಾತಿ ಆಧರಿತ ಗಣತಿಯ ವಿಷಯದಿಂದ ಪ್ರತಿಪಕ್ಷಗಳಲ್ಲಿ ಒಗ್ಗಟ್ಟು ಬರಬಹುದು. ಆಮ್ ಆದ್ಮಿ ಪಾರ್ಟಿ ಸಹ ಈ ವಿಷಯದಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡುತ್ತಿದೆ. ಜೆಡಿಯು, ಆರ್‌ಜೆಡಿ, ಸಮಾಜವಾದಿ ಪಕ್ಷ ಹಾಗೂ ಬಿ.ಎಸ್.ಪಿ.ಗಳೂ ಜಾತಿ ಆಧರಿತ ಗಣತಿಗೆ ಬಹಳ ದಿನಗಳಿಂದ ಒತ್ತಾಯಿಸುತ್ತಿವೆ.

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಕರೆದಿದ್ದ ಸರ್ವ ಪಕ್ಷಗಳ ಸಭೆಯಲ್ಲಿ ರಾಜ್ಯ ಬಿಜೆಪಿ ಘಟಕವು ಜಾತಿ ಗಣತಿಯನ್ನು ಬೆಂಬಲಿಸಿತ್ತು. ಆದರೆ, ಈ ಬಗ್ಗೆ ಬಿಜೆಪಿ ಕೇಂದ್ರ ನಾಯಕತ್ವ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

# ಬಿಜೆಪಿಯಿಂದ ಹಿಂದುಳಿದ ವರ್ಗಕ್ಕೆ ಅನ್ಯಾಯ

ದಾವಣಗೆರೆ, ಏ.18 - ಬಿಜೆಪಿಯಿಂದ ವಿಧಾನಸಭಾ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯದಡಿ ಸೂಕ್ತ ಸ್ಥಾನ ಒದಗಿಸದೇ ಅನ್ಯಾಯ ಮಾಡಲಾಗಿದೆ ಎಂದು ಆರೋಪಿಸಿ, ಜಿಲ್ಲಾ ಬಿಜೆಪಿ ಒಬಿಸಿ ಮೋರ್ಚಾ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಮಂಗಳವಾರ ನಗರದ ಕೆ.ಬಿ ಬಡಾವಣೆಯಲ್ಲಿ ಇಂದು ದಿಢೀರ್ ಪ್ರತಿಭಟನೆ ನಡೆಸಿ, ಪಕ್ಷದ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಹಾಗೂ ವರಿಷ್ಠರಿಗೆ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.



ಪ್ರತಿಭಟನೆ ಉದ್ದೇಶಿಸಿ ಹಿಂದುಳಿದ ವರ್ಗದ ಮೋರ್ಚಾ ಮುಖಂಡ ಎ.ಗುಡ್ಡಪ್ಪ ಮಾತನಾಡಿ, ಜಿಲ್ಲೆಯಲ್ಲಿ ಒಟ್ಟು ಏಳು ವಿಧಾನಸಭಾ ಕ್ಷೇತ್ರಗಳಿದ್ದು, ಪ್ರತಿ ಕ್ಷೇತ್ರದಲ್ಲಿ ಶೇ.68 ರಷ್ಟು ಹಿಂದುಳಿದ ವರ್ಗಗಳ ಮತದಾರರಿದ್ದಾರೆ. ಅಂದರೆ ದಾವಣಗೆರೆ ದಕ್ಷಿಣದಲ್ಲಿ 1,48,000, ದಾವಣಗೆರೆ ಉತ್ತರದಲ್ಲಿ 1,18,000, ಹೊನ್ನಾಳಿಯಲ್ಲಿ 1.73,000, ಹರಿಹರದಲ್ಲಿ 96,000, ಚನ್ನಗಿರಿಯಲ್ಲಿ 1,32,000, ಮಾಯಕೊಂಡದಲ್ಲಿ 1,10,000 ಹಾಗೂ ಜಗಳೂರಿನಲ್ಲಿ 83,000 ಜನ ಹಿಂದುಳಿದ ವರ್ಗದ ಮತದಾರರಿದ್ದು, ಸಾಮಾಜಿಕ ನ್ಯಾಯದಡಿ ಜಿಲ್ಲೆಗೆ ಕನಿಷ್ಠ 2 ಅಥವಾ 3 ಕ್ಷೇತ್ರಗಳಲ್ಲಿ ಹಿಂದುಳಿದ ವರ್ಗಗಳಿಗೆ ಪಕ್ಷದ ವತಿಯಿಂದ ಟಿಕೆಟ್ ನೀಡಬೇಕಾಗಿತ್ತು. ಆದರೆ ಹಿಂದುಳಿದವರಿಗೆ ಟಿಕೆಟ್ ನೀಡದೆ ಅನ್ಯಾಯವೆಸಗಿದೆ ಎಂದು ದೂರಿದರು.

ಪ್ರಸಕ್ತ ವಿಧಾನಸಭಾ ಚುನಾವಣೆಯಲ್ಲಿ ದಾವಣಗೆರೆ 7 ಕ್ಷೇತ್ರಗಳಲ್ಲಿ ಯಾವುದೇ ಒಂದು ಕ್ಷೇತ್ರದಲ್ಲೂ ಕೂಡ ಹಿಂದುಳಿದ ವರ್ಗಗಳಿಗೆ ಪಕ್ಷದ ಟಿಕೆಟ್ ನೀಡದ ಅಸಮಂಜಸ ಕ್ರಮದ ಹಿಂದೆ ಯಾವ ಕಾಣದ ಕೈಗಳು ಕೆಲಸ ಮಾಡಿವೆ ಎಂಬುದು ತಿಳಿಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹಿಂದುಳಿದ ಸಮುದಾಯಗಳಿಗೆ ನ್ಯಾಯ ನೀಡಲು ತಕ್ಷಣ ಕಾರ್ಯೋನ್ಮುಖರಾಗಿ ಇದೇ ದಿನಾಂಕ 20 ರೊಳಗೆ ಟಿಕೆಟ್ ನೀಡಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ ಅವರು, ಲೋಪದೋಷ ಸರಿಪಡಿಸದಿದ್ದಲ್ಲಿ ಚುನಾವಣೆ ದಿನದಂದು ಪಕ್ಷದ ವಿರುದ್ಧವಾಗಿ ಮತದಾನ ಮಾಡುವುದರ ಮೂಲಕ ಎಲ್ಲಾ ಹಿಂದುಳಿದ ಸಮುದಾಯದವರು ಸಂದೇಶ ರವಾನಿಸಲಿದ್ದೇವೆ ಎಂದು ಎಚ್ಚರಿಸಿದರು.

ಈ ವೇಳೆ ಒ.ಬಿ.ಸಿ ಮೋರ್ಚಾದ ನಿಂಗಪ್ಪ ಎನ್.ಜೆ. ವೆಂಕಟೇಶ್ ಟಿ, ಸಿದ್ದಪ್ಪ, ಪರಶುರಾಮ್ ಮತ್ತಿತರರಿದ್ದರು.

# ನಾಗರಾಜ್ ಲೋಕಿಕೆರೆ ಅವರಿಂದ ಮತ ಯಾಚನೆ



ದಾವಣಗೆರೆ, ಏ.18- ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷರೂ ಆದ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ನಗರದ ವಿವಿಧೆಡೆ ಪ್ರಚಾರ ನಡೆಸಿದರು. ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಜನರ ಮನೆ, ಮನಗಳಿಗೆ ತಲುಪುವಂತೆ ಬಿರುಸಿನ ಪ್ರಚಾರದ ಮುಖೇನ ಮತ ಯಾಚಿಸಿದ ಅವರು, ಯಾವುದೇ ಚುನಾವಣೆಯ ಆಮಿಷಗಳಿಗೆ ಒಳಗಾಗದೆ, ಅವುಗಳನ್ನು ತಿರಸ್ಕರಿಸುವ ಮೂಲಕ ನಗರ ಅಭಿವೃದ್ಧಿಗೆ ಒತ್ತು ನೀಡುವ ಜನಪ್ರತಿನಿಧಿಗಳಿಗೆ ನಿಮ್ಮ ಅಮೂಲ್ಯವಾದ ಹಕ್ಕನ್ನು ಚಲಾಯಿಸುವಂತೆ ಮತದಾರರಲ್ಲಿ ಮನವರಿಕೆ ಮಾಡಿದರು.

# ನಂದಿಗಾವಿ ಶ್ರೀನಿವಾಸ್‌ಗೆ ಟಿಕೆಟ್

(1ನೇ ಪುಟದಿಂದ) ಜಗದೀಶ್ ಶೆಟ್ಟರ್ ಅವರಿಗೆ ಹುಬ್ಬಳ್ಳಿ - ಧಾರವಾಡ ಕೇಂದ್ರ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ. ಶಿಗ್ಗಾಂವ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಸೆಣಸಲು ಮೊಹಮ್ಮದ್ ಯೂಸೂಫ್ ಸವಣೂರು ಅವರಿಗೆ ಟಿಕೆಟ್ ನೀಡಲಾಗಿದೆ.

ಚಿಕ್ಕಮಗಳೂರಿನಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ವಿರುದ್ಧ ಸ್ಪರ್ಧಿಸಲು ಹೆಚ್.ಡಿ. ತಿಮ್ಮಯ್ಯಗೆ ಟಿಕೆಟ್ ನೀಡಲಾಗಿದೆ.

ಲಿಂಗಸಗೂರು ಕ್ಷೇತ್ರದಿಂದ ಎಸ್. ದುರ್ಗಪ್ಪ, ಹುಬ್ಬಳ್ಳಿ - ಧಾರವಾಡ ಪಶ್ಚಿಮ ಕ್ಷೇತ್ರಕ್ಕೆ ದೀಪಕ್ ಚಿಚೋರೆ ಹಾಗೂ ಶ್ರವಣಬೆಳಗೊಳದಿಂದ ಎಂ.ಎ. ಗೋಪಾಲಸ್ವಾಮಿ ಸ್ಪರ್ಧಿಸಲು ಟಿಕೆಟ್ ನೀಡಲಾಗಿದೆ. ಕಾಂಗ್ರೆಸ್ ಇದುವರೆಗೂ 224 ಕ್ಷೇತ್ರಗಳ ಪೈಕಿ 216 ಅಭ್ಯರ್ಥಿಗಳ ಹೆಸರುಗಳನ್ನು ಪ್ರಕಟಿಸಿದೆ. ಇನ್ನೂ ಎಂಟು ಕ್ಷೇತ್ರಗಳ ಅಭ್ಯರ್ಥಿಗಳ ಹೆಸರು ಪ್ರಕಟಿಸಬೇಕಿದೆ.

# ನಗರದಲ್ಲಿ ವಿಪ್ರ ವಟು ಶಿಕ್ಷಣ ಶಿಬಿರ

ಬ್ರಾಹ್ಮಣ ಸಮಾಜ ಸೇವಾ ಸಂಘ ಮತ್ತು ವಿಪ್ರ ವಟು ಶಿಕ್ಷಣ ಸಮಿತಿ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಪ್ರ ವಟು ಶಿಕ್ಷಣ ಶಿಬಿರದ ಸಮಾರೋಪ ಸಮಾರಂಭವು ಇಂದು ಸಂಜೆ 4 ಗಂಟೆಗೆ ಬ್ರಾಹ್ಮಣ ವಿದ್ಯಾರ್ಥಿ ನಿಲಯದಲ್ಲಿ ನಡೆಯಲಿದೆ. ಮುಖ್ಯ ಅತಿಥಿಗಳು : ಡಾ|| ಬಿ. ಟಿ. ಅಚ್ಯುತ್, ಡಾ|| ಎಸ್. ಆರ್. ಹೆಗಡೆ.

# ಸರ್ಕಾರವನ್ನೇ ಕಾಯುವುದು ಬೇಡ

(1ನೇ ಪುಟದಿಂದ) ಬೆಂಗಳೂರಿನ ಹಿರಿಯ ಕಲಾವಿದ ಚಿ.ಸು. ಕೃಷ್ಣಶೆಟ್ಟಿ ಪಿಆರ್‌ಟಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, ಚಿತ್ರಕಲಾವಿದ ತಿಪ್ಪೇಸ್ವಾಮಿ ಅವರು ಮಾನವೀಯ ನೆಲೆಗಟ್ಟಿನ ಮೇಲೆ ಬದುಕು ಕಟ್ಟಿಕೊಂಡವರು. ಮಾನವ ಸಂಬಂಧವನ್ನು ಬೆಸೆಯುವ ಕೆಲಸವನ್ನು ಮಾಡುತ್ತಾ ಬಂದವರು. ಅವರೊಬ್ಬ ಅಜಾತ ಶತ್ರು, ಅವರ ವ್ಯಕ್ತಿತ್ವದಿಂದಲೇ ಅವರು ಜೀವನದಲ್ಲಿ ಉತ್ತುಂಗಕ್ಕೆ ಏರಿದ ಮಹಾನ್ ಕಲಾವಿದ. ನಿಸರ್ಗ ಚಿತ್ರಗಳನ್ನು ರಚಿಸುವ ಮೂಲಕ ಚಿತ್ರಕಲಾ ಕ್ಷೇತ್ರಕ್ಕೆ ಅವರ ಕೊಡುಗೆ ಅನನ್ಯವಾದುದು ಎಂದರು.

ಇತ್ತೀಚಿನ ದಿನಗಳಲ್ಲಿ ಚಿತ್ರಕಲೆ ಜನಮಾನಸದಿಂದ ದೂರ ಆಗುತ್ತಿದೆ ಎಂಬ ಆತಂಕ ಕಾಡುತ್ತಿದೆ. ಜನ ಸಾಮಾನ್ಯರನ್ನು ತಲುಪುವಲ್ಲಿ ಚಿತ್ರಕಲೆ ಹಿಂದೆ ಬಿದ್ದಿದೆ. ಚಿತ್ರಕಲಾ ಕ್ಷೇತ್ರದ ಮುಂದೆ ಅನೇಕ ಸವಾಲುಗಳು ಎದುರಾಗಿವೆ. ಅವೆಲ್ಲವುಗಳನ್ನು ಮೆಟ್ಟಿ ನಿಂತು ಚಿತ್ರಕಲಾ ಕ್ಷೇತ್ರವನ್ನು ಉಳಿಸಿ, ಬೆಳೆಸಬೇಕಾಗಿದೆ ಎಂದು ಹೇಳಿದರು.

ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ್ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿ, ವಿವಿ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಪಿ.ಆರ್. ತಿಪ್ಪೇಸ್ವಾಮಿ ಅಧ್ಯಯನ ಪೀಠವನ್ನು ಸ್ಥಾಪಿಸುವ ನಿಟ್ಟಿನಲ್ಲಿ ಚಿಂತನೆ ಅಗತ್ಯ. ಸರ್ಕಾರದ ಅನುದಾನ ಪಡೆಯಲು ಪ್ರಯತ್ನ ಮಾಡಬೇಕಾಗಿದೆ ಎಂದ ಅವರು, ಕಾಲೇಜು ಇನ್ನೂ ಅಭಿವೃದ್ಧಿ ಪಥದತ್ತ ಸಾಗಲಿ ಎಂದು ಶುಭ ಹಾರೈಸಿದರು.

ಪಿಆರ್‌ಟಿ ಪ್ರತಿಷ್ಠಾನದ ಅಧ್ಯಕ್ಷ ರಾಜಶೇಖರ ಕದಂಬ ಅಧ್ಯಕ್ಷತೆ ವಹಿಸಿದ್ದರು. ಇದೇ ವೇಳೆ ಚಿತ್ರಕಲಾವಿದ ಅಶೋಕ್ ವಿ. ಭಂಡಾರೆ ಹಾಗೂ ಚೌಡಕಿ ಪದ ಕಲಾವಿದೆ ರಾಧಾಬಾಯಿ ಮಾರುತಿ ಮಾದಾರ ಇವರಿಗೆ 25 ಸಾವಿರ ರೂ. ನಗದು, ಸ್ಮರಣಿಕೆಯೊಂದಿಗೆ 'ಪಿಆರ್‌ಟಿ ಕಲಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕೆ. ರಂಗನಾಥ್ ಪ್ರಾರ್ಥಿಸಿದರು. ಪ್ರತಿಷ್ಠಾನದ ಕಾರ್ಯದರ್ಶಿ ಕೆ.ಸಿ. ಮಹದೇವಶೆಟ್ಟಿ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಡಾ. ಸತೀಶ್ ಕುಮಾರ್ ಪಿ. ವಲ್ಲೇಪುರೆ, ದತ್ತಾತ್ರೇಯ ಭಟ್ ಮತ್ತಿತರರು ಉಪಸ್ಥಿತರಿದ್ದರು.

# ಸಂಕಟದ ಸಂದರ್ಭದಲ್ಲಿ ಕಲಾವಿದರ ಮೌನ ಆತಂಕಕಾರಿ

ದಾವಣಗೆರೆ, ಏ.18- ದೇಶ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಬದುಕು ಬಿಕ್ಕಟ್ಟಿನಲ್ಲಿರುವ ಸಂದರ್ಭದಲ್ಲಿ ಸಾಹಿತಿಗಳು, ಕಲಾವಿದರು ಮಾತನಾಡಬೇಕಾಗುತ್ತದೆ ಎಂದು ಹಿರಿಯ ಸಾಹಿತಿ, ಅಂಕಣಕಾರ ಮಲ್ಲಿಕಾರ್ಜುನ ಕಡಕೋಳ ಹೇಳಿದರು.

ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದೃಶ್ಯಕಲಾ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ, ನಗರದ ದೃಶ್ಯಕಲಾ ಮಹಾವಿದ್ಯಾಲಯದ ಸಭಾಂಗಣ ದಲ್ಲಿ ಮಂಗಳವಾರ 'ಪಿ.ಆರ್. ತಿಪ್ಪೇಸ್ವಾಮಿ ಕಲಾ ಸಂಭ್ರಮ-2023' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶ ಸಂಕಟದಲ್ಲಿದ್ದ ಸಂದರ್ಭದಲ್ಲಿ ಕಲಾವಿದರು, ಸಾಹಿತಿಗಳ ಮೇಲೆ ಜವಾಬ್ದಾರಿ ಹೆಚ್ಚಾಗಿರುತ್ತದೆ. ಅವರು ಕೃತಿಗಳು ಕಾದಂಬರಿಗಳು, ಕಥೆಗಳ ಮೂಲಕ ಮಾತನಾಡಬೇಕಾಗುತ್ತದೆ. ಸಾಹಿತಿಗಳು ಮಾತನಾಡುತ್ತಿದ್ದಾರೆ. ವ್ಯಂಗ್ಯ ಚಿತ್ರದ ಮೂಲಕ ಕೆಲ ಕಲಾವಿದರು ವ್ಯವಸ್ಥೆಯ ವಿರುದ್ಧ ಮಾತನಾಡುತ್ತಿದ್ದಾರೆ. ಆದರೆ ಹಿರಿಯ ಚಿತ್ರ ಕಲಾವಿದರು ಮೌನ ವಹಿಸಿರುವುದು ಆತಂಕಕಾರಿ ಎಂದರು.



ಮನುಷ್ಯನನ್ನು ಜಾತಿ, ಧರ್ಮದ ಹಿನ್ನೆಲೆಯಲ್ಲಿ ಗುರುತಿಸುವ ಸ್ಥಿತಿ ನಿರ್ಮಾಣವಾಗಿದೆ. ಸಂಸ್ಕೃತಿಯೊಳಗೆ ಧರ್ಮದ ಪ್ರವೇಶ ನಡೆಯುತ್ತಿದೆ. ಸಂಸ್ಕೃತಿ ಅಪ್ಪಟ ಸಂಸ್ಕೃತಿಯಾಗಿ ಉಳಿದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಜಾಪ್ರಭುತ್ವದ ನಿರ್ಣಾಯಕ ಘಟ್ಟದಲ್ಲಿ ನಾವಿದ್ದೇವೆ. ಕೋಮು ಶಕ್ತಿಗಳು, ಕಾರ್ಪೊರೇಟ್ ಶಕ್ತಿಗಳು ಹೊಂಚು ಹಾಕಿ ಕುಳಿತಿರುವ ವೇಳೆ ಸುಮ್ಮನಿದ್ದು, ಎಲ್ಲಾ ಮುಗಿದ ಮೇಲೆ ಭಾಷಣ ಮಾಡುವುದಕ್ಕಿಂತ, ಬೇಜವಾಬ್ದಾರಿ ತನ ಬದಿಗಿಟ್ಟು ಹೊಸ ಬದಲಾವಣೆಯ ಹಂತದಲ್ಲಿಯೇ ಪಕ್ಷಾತೀತವಾಗಿ, ಮನುಷ್ಯ ಸಂವೇದನೆ ಇಟ್ಟುಕೊಂಡು ಕಾರ್ಯ ನಿರ್ವಹಿಸಬೇಕಿದೆ ಎಂದು ಹೇಳಿದರು.

2024ನೇ ವರ್ಷಕ್ಕೆ ದೃಶ್ಯಕಲಾ ಮಹಾವಿದ್ಯಾಲಯಕ್ಕೆ 60 ವರ್ಷಗಳು ತುಂಬುತ್ತವೆ. ಇಷ್ಟೊತ್ತಿಗೆ ಈ ಕಾಲೇಜು ಅಖಿಲ ಭಾರತ ಮಟ್ಟದಲ್ಲಿ ಮಾನ್ಯತೆ ಪಡೆಯಬೇಕಿತ್ತು. ಕಾರಣಾಂತರಗಳಿಂದ ಅದು ಸಾಧ್ಯವಾಗಿಲ್ಲ. ಈ ನಿಟ್ಟಿನಲ್ಲಿ ವ್ಯವಸ್ಥಿತ ಕಾರ್ಯಕ್ರಮವೊಂದನ್ನು ನಡೆಸಿ, ಕಾಲೇಜಿನ ಒಟ್ಟು ಚಿತ್ರಣವನ್ನು ಬದಲಿಸಬೇಕಿದೆ ಎಂದು ಅಭಿಪ್ರಾಯಿಸಿದರು.

ರಂಗಕರ್ಮಿ, ಕೆಬಿಆರ್ ನಾಟಕ ಕಂಪನಿ ಮಾಲೀಕ ಚಿಂದೋಡಿ ಚಂದ್ರಧರ್ ಮಾತನಾಡಿ, ಕಲಾ ಸಮೂಹ ಜಾತ್ಯತೀತ, ಭಾಷಾತೀತವಾದದ್ದು. ನಿಜವಾದ ಜಾತ್ಯತೀತತೆ ಇರುವುದು ಕಲಾ ಪ್ರಕಾರಗಳಲ್ಲಿ ಮಾತ್ರ. ಕಲಾ ಶಾಲೆಗಳು ನೈತಿಕತೆ ಹೇಳಿಕೊಡುವ ಶಾಲೆಗಳಾಗಿವೆ ಎಂದರು.

ದೃಶ್ಯಕಲಾ ಮಹಾವಿದ್ಯಾಲಯದ ಸಂಯೋಜನಾಧಿಕಾರಿ ಡಾ.ಸತೀಶ್ ಕುಮಾರ್ ಪಿ.ವಲ್ಲೇಪುರೆ, ಹಿರಿಯ ಕಲಾವಿದ ನಾ. ರೇವಣಸಿದ್ದಪ್ಪ, ಚಿತ್ರಕಲಾ ಪರಿಷತ್ ಅಧ್ಯಕ್ಷ ಸದಾನಂದ ಹೆಗಡೆ, ಕಲಾ ಪರಿಷತ್ ಅಧ್ಯಕ್ಷ ಎ.ಮಹಾಲಿಂಗಪ್ಪ, ಕಲಾಕುಂಚ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ, ನಾಗರಾಜ್ ಇತರರು ಉಪಸ್ಥಿತರಿದ್ದರು.

ವಿದ್ಯಾರ್ಥಿ ಮುರಳಿ ಕೃಷ್ಣ ಪ್ರಾರ್ಥಿಸಿದರು. ಪಿ.ಆರ್.ಟಿ. ಪ್ರತಿಷ್ಠಾನದ ಕಾರ್ಯದರ್ಶಿ ಕೆ.ಸಿ. ಮಹದೇವ ಶೆಟ್ಟಿ ಸ್ವಾಗತಿಸಿದರು. ಸಿ.ಚಿಕ್ಕಣ್ಣ ನಿರೂಪಿಸಿದರು. ಡಾ. ಮೈಲಳ್ಳಿ ರೇವಣ್ಣ ವಂದಿಸಿದರು.

**ಸಾಹಿತಿ ಮಲ್ಲಿಕಾರ್ಜುನ ಕಡಕೋಳ**

# ಉತ್ತರದ ಸಂಯುಕ್ತ ವಿಕಾಸ ಪಕ್ಷದ ಅಭ್ಯರ್ಥಿ ಸುರ್ಜಿತ್

ದಾವಣಗೆರೆ, ಏ.18- ರಾಜ್ಯದ ಪ್ರತಿ ತಾಲ್ಲೂಕಿನಲ್ಲೂ 1 ಸಾವಿರ ಬಡ ಕುಟುಂಬಗಳಿಗೆ ಉದ್ಯೋಗ ಮತ್ತು ಮನೆ ನಿರ್ಮಾಣ ಮಾಡಲಾಗುವುದು ಎಂದು ಸಂಯುಕ್ತ ವಿಕಾಸ ಪಕ್ಷ (ರಾಷ್ಟ್ರೀಯ) ಕರ್ನಾಟಕದ ರಾಷ್ಟ್ರೀಯ ಅಧ್ಯಕ್ಷ ಗಾನಶ್ರವಣ್ ಸ್ವಾಮೀಜಿ ತಿಳಿಸಿದ್ದಾರೆ.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಕ್ಷದ ಪ್ರಣಾಳಿಕೆ ಕುರಿತು ಮಾಹಿತಿ ನೀಡಿ ಪಕ್ಷವು ಕರ್ನಾಟಕದಲ್ಲಿ ಕೈಗೊಳ್ಳುತ್ತಿರುವ ಕಾರ್ಯಕ್ರಮಗಳು ಸಮಾಜ ಮುಖಿಯಾಗಿವೆಯಲ್ಲದೇ ಈಡೇರಿಸಲಾಗದ ಭರವಸೆಗಳನ್ನು ನಾವು ನೀಡುವುದಿಲ್ಲ ಎಂದರು.

ಅಂತರರಾಷ್ಟ್ರೀಯ ಚಿನ್ನದ ಹಾಗೂ ವಿಶೇಷ ಲೋಹಗಳ ವ್ಯಾಪಾರಿಯಾಗಿರುವ ನಾನು ಅದರಿಂದ ಬಂದ ಲಾಭದಲ್ಲಿ ಕರ್ನಾಟಕದ ಪ್ರತಿ ತಾಲೂಕಿನಲ್ಲಿ ನಮ್ಮ ಪಕ್ಷದ ಕಚೇರಿ ತೆರೆಯಲು ಎಲ್ಲ ಸಿದ್ಧತೆ ಮಾಡಿಕೊಂಡಿದ್ದು, ಪಕ್ಷದ ಕಚೇರಿಗಳು ಸಾರ್ವಜನಿಕ ಸಂಪರ್ಕ ಹಾಗೂ ಮಾಹಿತಿ ಕೇಂದ್ರಗಳಾಗಿಯೂ ಕಾರ್ಯ ನಿರ್ವಹಿಸುತ್ತೇವೆ. ಹಾಗೆಯೇ ಪ್ರತಿ ತಾಲ್ಲೂಕಿನಲ್ಲಿಯೂ 1000 ಬಡ ಕುಟುಂಬಗಳಿಗೆ ಕೆಲಸ ಹಾಗೂ ಮನೆಯನ್ನು ಒದಗಿಸಲು ಕ್ರಮಕೈಗೊಳ್ಳಲಾಗುತ್ತಿದೆ ಎಂದರು.

> ದೇಶ, ವಿದೇಶಗಳಲ್ಲಿ ವಿವಿಧ ವ್ಯಾಪಾರ, ವಹಿವಾಟನ್ನು ಹೊಂದಿರುವ ನಾನು ಕೇರಳದ ಭಗವತಿ ದೇವಸ್ಥಾನದ ಅಭಿವೃದ್ಧಿಗೆ 700 ಕೋಟಿ ರೂ. ದೇಣಿಗೆ ನೀಡಿದ್ದೇನೆ. ಅದೇ ಮಾದರಿಯಲ್ಲಿ ಕರ್ನಾಟಕದಲ್ಲೂ ಜನರ ಸೇವೆ ಮಾಡಲು ಬಯಸಿದ್ದೇನೆ.
>
> - ಗಾನಶ್ರವಣ್ ಸ್ವಾಮೀಜಿ, ರಾಷ್ಟ್ರೀಯ ಅಧ್ಯಕ್ಷರು, ಸಂಯುಕ್ತ ವಿಕಾಸ ಪಕ್ಷ (ರಾಷ್ಟ್ರೀಯ)

ಬಡವರಿಗೆ ಸುಸಜ್ಜಿತವಾದ ಸಂಪೂರ್ಣ ಉಚಿತ ಚಿಕಿತ್ಸೆ ನೀಡುವ ಆಸ್ಪತ್ರೆ ಹಾಗೂ ಹೈಟೆಕ್ ಶಾಲೆಯನ್ನು ಆರಂಭಿಸಲು ನಿರ್ಧರಿಸಲಾಗಿದೆ. ಇದಕ್ಕಾಗಿ 10 ಸಾವಿರ ಕೋಟಿ ರೂಪಾಯಿಗಳನ್ನು ವಿನಿಯೋಗಿಸುತ್ತಿದ್ದೇವೆ.

ಪ್ರತಿ ತಾಲ್ಲೂಕಿನಲ್ಲಿ ಪ್ರತಿ 5 ಕಿಲೋಮೀಟರ್ ವ್ಯಾಪ್ತಿಯಲ್ಲಿ ಉಚಿತ ಆಂಬ್ಯುಲೆನ್ಸ್ ಸೇವೆಸಿಗುವಂತೆ ಮಾಡಲಾಗುವುದು. ಜೊತೆಗೆ ಉಚಿತ ಶಾಲಾ ವಾಹನಗಳನ್ನೂ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದರು.

ದೇಶದ 19 ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ಸಂಯುಕ್ತ ವಿಕಾಸ ಪಕ್ಷ (ರಾಷ್ಟ್ರೀಯ) ರಾಜ್ಯದಲ್ಲಿ ಈಗಾಗಲೇ 175 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ದಾವಣಗೆರೆ ಉತ್ತರ ಕ್ಷೇತ್ರದಿಂದ ಸುರ್ಜಿತ್ ಅವರು ಕಣಕ್ಕೆ ಇಳಿಯಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಲೋಹಿತ್, ಆಂಟೋನಿ, ವಿಜಯ್ ಮತ್ತಿತರರಿದ್ದರು.

# ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಬೇಸಿಗೆಯ ಹಿನ್ನೆಲೆಯಲ್ಲಿ ಸಾಮಾಜಿಕ ಸೇವಾ ಸಂಸ್ಥೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ದಾನಿಗಳ ನೆರವಿನೊಂದಿಗೆ 1 ತಿಂಗಳ ಪರ್ಯಂತ ಸಾರ್ವಜನಿಕರಿಗೆ ಉಚಿತ ಮಜ್ಜಿಗೆ ವಿತರಿಸುವ ಕಾರ್ಯಕ್ರಮವನ್ನು ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದೆ. ಅಥಣಿ ಹಿರೇಮಠದ ಶಿವಪ್ಪಯ್ಯ ನವರ ಮೊಮ್ಮಗ ಎ.ಹೆಚ್. ಆನಂದ, ಮರಿಮೊಮ್ಮಕ್ಕಳಾದ ಎ.ಹೆಚ್. ಸಂತೋಷ್, ಎ.ಹೆಚ್. ಸಂದೇಶ್ ಅವರು ಇಂದಿನ ಮಜ್ಜಿಗೆ ದಾನಿಗಳಾಗಿದ್ದಾರೆ ಎಂದು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ತಿಳಿಸಿದ್ದಾರೆ. ಕರುಣಾ ಜೀವ ಕಲ್ಯಾಣ ಟ್ರಸ್ಟಿನ ಸತ್ಕಾರ್ಯಗಳಾದ ಮಜ್ಜಿಗೆ, ಗಾಡಿ, ಸೈಕಲ್, ನೀರಿನ ಬಾನಿ ವಿತರಣೆ ಇತ್ಯಾದಿಗಳಿಗೆ ದಾನ ಮಾಡಲಿಚ್ಛಿಸುವವರು ಎಂ.ಬಿ. ಮಧುಸೂದನ್ (98806 -02121ಅಥವಾ 95380-24444) ಅವರನ್ನು ಸಂಪರ್ಕಿಸಬಹುದು.

# ಎಸ್ಸೆಸ್ಸೆಲ್ಸಿ : ವಿದ್ಯಾರ್ಥಿಗಳಿಗೆ ಬ್ರಿಡ್ಜ್ ಕೋರ್ಸ್

ಹರಿಹರ , ಏ. 18- ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಚಂದ್ರಗುಪ್ತ ಮೌರ್ಯ ಸಂಯುಕ್ತ ಪದವಿ ಪೂರ್ವ ಕಾಲೇಜ್ (ಬೆಳ್ಳೂಡಿ) ಹಾಗೂ ಆದಿಕೇಶವ ಅಕಾಡೆಮಿ (ದಾವಣಗೆರೆ) ಇವರ ವತಿಯಿಂದ ನಗರದ ಗಿರಿಯಮ್ಮ ಕಾಲೇಜು ಆವರಣದಲ್ಲಿರುವ ಶ್ರೀ ಸಂಗಮೇಶ ಪ್ರೌಢ ಶಾಲೆಯಲ್ಲಿ ನಾಡಿದ್ದು ದಿನಾಂಕ 20 ರಿಂದ ಮೇ 20 ರವರೆಗೆ ಉಚಿತ ಬ್ರಿಡ್ಜ್ ಕೋರ್ಸ್ ಮಾಡಲಾಗುತ್ತಿದೆ. ವಿಜ್ಞಾನ ವಿಭಾಗ ಸೇರ ಬಯಸುವ ಆಸಕ್ತ ವಿದ್ಯಾರ್ಥಿಗಳಿಗಾಗಿ ಹಾಗೂ ಕೊರೊನಾ ಸಂದರ್ಭದಲ್ಲಿ 8 ಮತ್ತು 9 ನೇ ತರಗತಿಯಲ್ಲಿ ಕಲಿಯದೆ ಇರುವ ಗಣಿತ ಮತ್ತು ವಿಜ್ಞಾನ ವಿಷಯಗಳನ್ನು ಸೇರಿದಂತೆ ಹಾಗೂ ಮೂಲಭೂತ ಪರಿಕಲ್ಪನೆಗಳ ಜೊತೆಗೆ ನೀಟ್/ ಜೇಇಇ/ ಕೆಸಿಇಟಿ/ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವ ಸಿದ್ದತೆ ಕುರಿತು ಈ ಬ್ರಿಡ್ಜ್ ಕೋರ್ಸ್ ತರಬೇತಿಯಲ್ಲಿ ವಿದ್ಯಾರ್ಥಿಗಳಿಗೆ ತಿಳಿಸಿಕೊಡಲಾಗುವುದು. ವಿವರಕ್ಕೆ ಸಂಪರ್ಕಿಸಿ ದೂರವಾಣಿ : 9008526469 - 6360712877 – 9535250766.

# ವ್ಯಾಪಕ ತಂತ್ರಜ್ಞಾನ, ಅನ್ವೇಷಣೆಗೆ ಉತ್ತೇಜನ

## ತುಮಕೂರು ವಿ.ವಿ.ಯ ಡಾ.ಪಿ. ಪರಮಶಿವಯ್ಯ




ದಾವಣಗೆರೆ, ಏ. 18 – ಭಾರತದಲ್ಲಿ ತಂತ್ರಜ್ಞಾನದ ಬಳಕೆ ವ್ಯಾಪಕವಾಗುತ್ತಿದೆ. ಜನಸಮೂಹ ದಲ್ಲಿ ತಂತ್ರಜ್ಞಾನ ಬಳಕೆ ಹೆಚ್ಚಾಗುತ್ತಿರುವುದರಿಂದ ಅನ್ವೇಷಣೆ ಹಾಗೂ ಉತ್ಪಾದನೆಗೆ ಅತಿ ಹೆಚ್ಚಿನ ಉತ್ತೇಜನ ಸಿಗುತ್ತಿದೆ ಎಂದು ತುಮಕೂರು ವಿಶ್ವವಿದ್ಯಾನಿಲಯದ ವಾಣಿಜ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ. ಪಿ. ಪರಮಶಿವಯ್ಯ ತಿಳಿಸಿದರು.

ನಗರದ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈ - ಟೆಕ್ ಎಜುಕೇಷನ್‌ನ ವಾಣಿಜ್ಯ ವಿಭಾಗದಿಂದ ಆಯೋಜಿಸಲಾಗಿದ್ದ 'ಪ್ರಜ್ಞಾ' ಒಂದು ದಿನದ ವಿದ್ಯಾರ್ಥಿಗಳ ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಭಾರತ, ಯುವಕರೇ ಹೆಚ್ಚಾಗಿ ರುವ ದೇಶವಾಗಿರುವುದರಿಂದ ಇಲ್ಲಿ ನವೋದ್ಯಮ ಹಾಗೂ ಅನ್ವೇಷಣೆ ಗಳಿಗೆ ಅತಿ ಹೆಚ್ಚಿನ ಅವಕಾಶವಿದೆ. ಬದಲಾಗುತ್ತಿರುವ ಆರ್ಥಿಕತೆ ಹಾಗೂ ಬೇಡಿಕೆಗಳನ್ನು ಪರಿಗಣಿಸಿ ಈ ಅವಕಾಶಗಳ ಲಾಭ ಪಡೆಯಬೇಕಿದೆ ಎಂದು ತಿಳಿಸಿದರು.

ಹದಿನೈದು ವರ್ಷಗಳ ಹಿಂದೆ ಬಿ.ಪಿ.ಒ. ವಲಯ ಅತಿ ಹೆಚ್ಚು ಬೆಳವಣಿಗೆ ಕಾಣುತ್ತಿತ್ತು. ಹಲವು ವಲಯಗಳ ಪದವೀಧರರಿಗೆ ಉದ್ಯೋಗ ಗಳು ಸಿಗುತ್ತಿದ್ದವು. ಈಗ ಆ ವಲಯ ಸಂಪೂರ್ಣ ಮರೆಯಾಗಿದೆ. ಅಲ್ಲೀಗ ಕೃತಕ ಬುದ್ಧಿವಂತಿಕೆ ಬಳಕೆಯಾಗುತ್ತಿದೆ. ಅದೇ ರೀತಿ ಮುಂದಿನ ಮೂರು ದಶಕಗಳಲ್ಲಿ ಈಗಿರುವ ಎಸ್.ಡಿ.ಎ., ಎಫ್.ಡಿ.ಸಿ. ಸೇರಿದಂತೆ ಬಹುತೇಕ ಉದ್ಯೋಗಗಳು ಮರೆಯಾಗಿ, ಹೊಸ ರೀತಿಯ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದವರು ಹೇಳಿದರು.

ಮುಂಬೈ ಒಂದರಲ್ಲೇ 800ಕ್ಕೂ ಹೆಚ್ಚು ಎಸ್.ಬಿ.ಐ. ಬ್ಯಾಂಕ್ ಶಾಖೆಗಳಿದ್ದವು. ಸಾವಿರಾರು ಗ್ರಾಹಕರು ಪ್ರತಿದಿನ ಬರುತ್ತಿದ್ದರು. ಈಗ 100 ಶಾಖೆಗಳೂ ಉಳಿದಿಲ್ಲ. ಪ್ರತಿದಿನ ಬರುವವರ ಸಂಖ್ಯೆಯಲ್ಲಿ ಶೇ.90ರಷ್ಟು ಇಳಿಕೆಯಾಗಿದೆ. ಮುಂದಿನ ದಿನಗಳಲ್ಲಿ ಬ್ಯಾಂಕ್ ಶಾಖೆಗಳು ಸಂಪೂರ್ಣವಾಗಿ ಭೌತಿಕ ಸ್ವರೂಪ ಕಳೆದುಕೊಳ್ಳುವ ಸಾಧ್ಯತೆ ಇದೆ ಎಂದರು.

ವಿಮೆ, ಸಹಕಾರ, ಸರಕು ಪೂರೈಕೆಯಿಂದ ಹಿಡಿದು ಹೋಟೆಲ್‌ಗಳವರೆಗೆ ಎಲ್ಲ ವಲಯಗಳ ಕಾರ್ಯನಿರ್ವಹಣೆ ದೊಡ್ಡ ಪ್ರಮಾಣದಲ್ಲಿ ಬದಲಾವಣೆ ಕಾಣಲಿದೆ. ಹಿಂದೊಂದು ಕಾಲದಲ್ಲಿ ಕೈಗಾರಿಕೀಕರಣ ಇಲ್ಲವೇ ವಿನಾಶ ಎಂಬ ಮಾತಿತ್ತು, ಈಗ ಆವಿಷ್ಕಾರ ಇಲ್ಲವೇ ವಿನಾಶ ಎಂಬ ಪರಿಸ್ಥಿತಿ ಬಂದಿದೆ ಎಂದು ತಿಳಿಸಿದರು.

ವೇದಿಕೆಯ ಮೇಲೆ ಬಾಪೂಜಿ ಹೈ ಟೆಕ್ ಎಜುಕೇಷನ್ ಸಂಸ್ಥೆಯ ನಿರ್ದೇಶಕ ಡಾ. ಸ್ವಾಮಿ ತ್ರಿಭುವಾನಂದ, ಬಿ.ಐ.ಇ.ಟಿ. ವಿಭಾಗ ಮುಖ್ಯಸ್ಥ ಡಾ. ಸುಜಿತ್ ಕುಮಾರ್, ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಪ್ರಾಂಶುಪಾಲ ಡಾ. ನವೀನ್ ಉಪಸ್ಥಿತರಿದ್ದರು. ಸಂಜನ ಪ್ರಾರ್ಥಿಸಿದರು. ಡಿ. ರೂಪ ಹಾಗೂ ವಿ.ಎಸ್. ಸಂಜನ ನಿರೂಪಿಸಿದರು. ಪವನ್ ವಂದಿಸಿದರು.

## ನಿನ್ನೆಯ ಐಷಾರಾಮ, ಇಂದಿನ ಅಗತ್ಯ

ಕಳೆದ ಕೆಲ ದಶಕಗಳಿಂದ ದೇಶದ ಜನರಲ್ಲಿ ಖರೀದಿ ಸಾಮರ್ಥ್ಯ ಅಪಾರವಾಗಿ ಹೆಚ್ಚಾಗಿದೆ. ಹೀಗಾಗಿ 70-80ರ ದಶಕದಲ್ಲಿ ಐಷಾರಾಮಿ ಎನ್ನಲಾಗುತ್ತಿದ್ದ ಸರಕುಗಳೆಲ್ಲ ಈಗ ಅಗತ್ಯ ವಸ್ತುಗಳೆಂದು ಪರಿಗಣಿಸಲಾಗುತ್ತಿದೆ ಎಂದು ಡಾ. ಪಿ. ಪರಮಶಿವಯ್ಯ ಹೇಳಿದರು.

ಟಿ.ವಿ., ವಾಷಿಂಗ್ ಮಷಿನ್, ಮನೆ, ದ್ವಿಚಕ್ರ ವಾಹನ ಇಲ್ಲವೇ ಕಾರುಗಳನ್ನು ನಿವೃತ್ತಿಯ ಒಳಗೆ ಖರೀದಿಸಿದರೆ ಅದೇ ಐಷಾರಾಮ ಎಂದು ಹಿಂದಿನ ಪೀಳಿಗೆಯ ಜನರು ಭಾವಿಸುತ್ತಿದ್ದರು. ಆದರೆ, ಈ ವಸ್ತುಗಳನ್ನೆಲ್ಲ ಈಗಿನ ಪೀಳಿಗೆ ಮದುವೆಯ ಮುಂಚೆಯೇ ಖರೀದಿಸುತ್ತಿದೆ. ಟಿವಿ, ವಾಷಿಂಗ್ ಮಷಿನ್, ಫ್ರಿಜ್ ಇತ್ಯಾದಿಗಳು ಈಗ ಐಷಾರಾಮಿ ವಸ್ತುಗಳಲ್ಲ, ಅಗತ್ಯ ವಸ್ತುಗಳೆಂದು ಪರಿಗಣಿಸಲಾಗುತ್ತಿದೆ ಎಂದು ತಿಳಿಸಿದರು.

# ರಾಣೇಬೆನ್ನೂರು ವಿಧಾನಸಭೆಗೆ ಡಾ. ಮೋಹನ ಹಂಡೆ, ಮನಿಮಠ ಸ್ಪರ್ಧೆ





ರಾಣೇಬೆನ್ನೂರು, ಏ.18- ಮಾಜಿ ಮುಖ್ಯ ಮಂತ್ರಿ ಎಸ್. ಬಂಗಾರಪ್ಪ ಅವರ ಅನುಯಾಯಿಯಾಗಿ ಮೂರು ದಶಕಗಳ ಹಿಂದೆ ರಾಜಕೀಯ ಪ್ರವೇಶಿಸಿದ್ದ ಡಾ.ಮೋಹನ ಹಂಡೆ ಅವರು ವಿವಿಧ ಪಕ್ಷಗಳಿಂದ ಎರಡು ಬಾರಿ ವಿಧಾನಸಭೆ, ಒಂದು ಬಾರಿ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿ ಸೋಲು ಕಂಡಿದ್ದು, ಈಗ ಪಕ್ಷೇತರರಾಗಿ ವಿಧಾನಸಭೆಗೆ ಸ್ಪರ್ಧಿಸುವುದಾಗಿ ತಿಳಿಸಿದ್ದಾರೆ. ನನ್ನ ಸಹಾಯ ಪಡೆದು ಆಯ್ಕೆಯಾಗಿದ್ದ ಮಾಜಿ ಸಭಾಪತಿ ಕೆ.ಬಿ. ಕೋಳಿವಾಡ ಹಾಗೂ ಮಾಜಿ ಮಂತ್ರಿ ಆರ್.ಶಂಕರ್ ಅವರುಗಳು ತಮಗೆ ಬೆಂಬಲ ನೀಡಿ ನನ್ನ ಋಣ ತೀರಿಸಬೇಕಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಡಾ. ಹಂಡೆ ಹೇಳಿದರು.

**ಮನಿಮಠ ಸ್ಪರ್ಧೆ :** ಸಾಮಾಜಿಕ ಜಾಲತಾಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಂಜಯ್ಯ ಮನಿಮಠ ಅವರು ಹಿಂದೂಸ್ತಾನ್ ಜನತಾ ಪಕ್ಷದಿಂದ ಈ ಬಾರಿ ಸ್ಪರ್ಧಿಸಲು ಟಿಕೆಟ್ ಪಡೆದಿದ್ದು, ನಾಡಿದ್ದು ದಿನಾಂಕ 20 ಅಮಾವಾಸ್ಯೆ ದಿನದಂದು ನಾಮಪತ್ರ ಸಲ್ಲಿಸುವುದಾಗಿ ತಿಳಿಸಿದ್ದಾರೆ.

# ನಿಮ್ಮ ನಿರೀಕ್ಷೆಗಳೇನು ? : ಸಂವಾದದಲ್ಲಿ ಮತದಾರರನ್ನು ಪ್ರಶ್ನಿಸಿದ ಡಾ. ಪ್ರಭಾ



ದಾವಣಗೆರೆ, ಏ.18- ಕಾಂಗ್ರೆಸ್ ಅಭ್ಯರ್ಥಿಗಳಾದ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಶಾಮನೂರು ಶಿವಶಂಕರಪ್ಪ ಅವರಿಗೆ ನೀಡುವ ಮತಗಳು ಮನುಷ್ಯತ್ವ ಹಾಗೂ ಮಾನವೀಯತೆಗೆ ನೀಡುವ ಮತವಾಗಿದೆ. ಕೋವಿಡ್ ಸಮಯದಲ್ಲಿ ಅವರು ನೀಡಿದ ಸೇವೆಯನ್ನು ನಾವುಗಳು ಎಂದೂ ಮರೆಯಬಾರದು ಎಂದು ಹಿರಿಯರೊಬ್ಬರು ಅಭಿಪ್ರಾಯ ವ್ಯಕ್ತಪಡಿಸಿದರು.

ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಸ್ನೇಹ ಮಹಿಳಾ ಬಳಗದ 80 ಕ್ಕೂ ಹೆಚ್ಚು ಮಹಿಳೆಯರ ಜೊತೆ ಸಂವಾದ ನಡೆ ಸಿದಾಗ ಈ ಅಭಿಪ್ರಾಯ ವ್ಯಕ್ತವಾಯಿತು.

ಸಂವಾದ ಕಾರ್ಯಕ್ರಮದಲ್ಲಿ ಪ್ರತಿ ಯೊಬ್ಬರ ಬಳಿ ತೆರಳಿ ನಿಮ್ಮ ನಿರೀಕ್ಷೆಗಳೇ ನಿದ್ದವು, ನಮ್ಮ ಕೆಲಸ ನಿಮಗೆ ಇಷ್ಟ ಆಗಿದೆಯೇ? ನಿಮ್ಮನೇರ ಉತ್ತರಕ್ಕಾಗಿಯೇ ನಾನು ಸಂವಾದ ಕಾರ್ಯ ಕ್ರಮಗಳನ್ನು ನಡೆಸುತ್ತಿದ್ದೇನೆ ಎಂದು ತಿಳಿಸಿ, ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಯ ಮಾಡಲು ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿರಿ ಎಂದು ಡಾ. ಪ್ರಭಾ ಮನವಿ ಮಾಡಿದರು.

# ಮಾಯಕೊಂಡದ ಬಿಜೆಪಿ ಬಂಡಾಯ ಅಭ್ಯರ್ಥಿ ಇಂದು ನಾಮಪತ್ರ ಸಲ್ಲಿಕೆ

ದಾವಣಗೆರೆ, ಏ.18- ಮಾಯಕೊಂಡ ಮೀಸಲು (ಎಸ್‌ಸಿ) ವಿಧಾನಸಭಾ ಕ್ಷೇತ್ರದ ಬಿಜೆಪಿ ಬಂಡಾಯಗಾರರ ಒಕ್ಕೂಟದ ಅಭ್ಯರ್ಥಿ ಆರ್.ಎಲ್.ಶಿವಪ್ರಕಾಶ್ ಅವರು ನಾಳೆ ದಿನಾಂಕ 19 ರ ಬುಧವಾರ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಬಿಜೆಪಿ ರಾಜ್ಯ ಎಸ್ಸಿ ಮೋರ್ಚಾ ಕಾರ್ಯದರ್ಶಿ ಎಚ್.ಕೆ. ಬಸವರಾಜ್ ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಲಿ ಘೋಷಿತ ಬಸವರಾಜ ನಾಯ್ಕ ನಾಮಪತ್ರ ಸಲ್ಲಿಕೆಗೂ ಮುನ್ನ ಕ್ಷೇತ್ರದ ಆಕಾಂಕ್ಷಿಗಳ ಜೊತೆಗೆ ಮಾತನಾಡಿ ಹೊಸ ಮುಖಗಳಿಗೆ ಆದ್ಯತೆ ನೀಡುವುದಾಗಿ ವರಿಷ್ಠರು ತಿಳಿಸಿದ್ದರು. ನಾವು ಕೂಡ ಇದಕ್ಕೆ ಸಮ್ಮತಿಸಿ ಸುಮ್ಮನಿದ್ದೆವು. ಆದರೆ, ಮಂಗಳವಾರ ಏಕಾಏಕಿ ಬಸವರಾಜ ನಾಯ್ಕ್ ಅವರು ನಾಮಪತ್ರ ಸಲ್ಲಿಸಿದ್ದು, ಈ ಮೂಲಕ ವರಿಷ್ಠರು ಮಾತು ತಪ್ಪಿದ್ದಾರೆ ಎಂದರು.

ಈಗಾಗಲೇ ಬಸವರಾಜ ನಾಯ್ಕ ಅವರಿಗೆ ನೀಡಿರುವ ಬಿ.ಫಾರಂ ಅನ್ನು ರದ್ದುಪಡಿಸಿ, 8 ಜನ ಬಂಡಾಯಗಾರರ ಪೈಕಿ ಯಾರೊಬ್ಬರಿಗಾದರೂ ಸಿ ಫಾರಂ ನೀಡಿದರೆ, ನಾವು ಬಂಡಾಯ ವಾಪಾಸ್ ಪಡೆಯುತ್ತೇವೆ. ಇಲ್ಲವಾದರೆ ನಮ್ಮ ಹೋರಾಟ ಮುಂದುವರಿಯಲಿದೆ ಎಂದು ಹೇಳಿದರು.

ಮಂಜಾನಾಯ್ಕ್ ಮಾತನಾಡಿ, ಕಣದಿಂದ ಹಿಂದಕ್ಕೆ ಸರಿಯುವಂತೆ ಆಮಿಷ, ಬೆದರಿಕೆ ಒಡ್ಡಲಾಗುತ್ತಿದೆ. ನಾವು ರಾಜೀಯಾಗಿದ್ದೇವೆ ಎಂದು ಅಪ ಪ್ರಚಾರ ಮಾಡಲಾಗುತ್ತಿದೆ. ಆದರೆ ನಾವು 8 ಜನರು ಒಟ್ಟಿಗೆ ಇದ್ದೇವೆ. ದಿಶಾ ಸಮಿತಿ ಸದಸ್ಯರಾಗಿರುವ ವೆಂಕಟೇಶ್ ಮತ್ತು ಕೌಟುಂಬಿಕ ಕಾರಣಗಳಿಂದ ಶ್ಯಾಮ್ ಹೊರಗಿದ್ದಾರೆ. ಉಳಿದಂತೆ ನಾವು 8 ಜನರು ಒಟ್ಟಾಗಿದ್ದೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಆಕಾಂಕ್ಷಿಗಳಾದ ಹನುಮಂತನಾಯ್ಕ, ಆರ್.ಎಲ್. ಶಿವಪ್ರಕಾಶ್, ರಮೇಶ್ ನಾಯ್ಕ್, ಆಲೂರು ಲಿಂಗರಾಜ್, ಮೋಹನ್ ಕುಮಾರ್, ಅನಿಲ್ ಕುಮಾರ್ ಮತ್ತಿತರರಿದ್ದರು.

## ಬಾಲಕನ ಹೃದಯ ಸಂಬಂಧಿ ಚಿಕಿತ್ಸೆಗೆ ಸಹಾಯ ಮಾಡಲು ಪೋಷಕರ ಮನವಿ

ದಾವಣಗೆರೆ, ಏ.18- ತಾಲ್ಲೂಕಿನ ಹೊನ್ನೂರು ಗ್ರಾಮದ ವಾಸಿ ಪರಮೇಶ ಅವರ ಮಗ ಮಣಿಕಂಠ ಎಂಬ 13 ವರ್ಷದ ಬಾಲಕನಿಗೆ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದು, ಚಿಕಿತ್ಸೆಗಾಗಿ ಪ್ರತಿ ದಿನ 5 ರಿಂದ 6 ಸಾವಿರ ರೂ. ವೆಚ್ಚವಾಗುತ್ತಿದೆ. ಬಾಲಕನ ಪೋಷಕರು ಕೂಲಿ ಕೆಲಸ ಮಾಡಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಹಾಗಾಗಿ ಚಿಕಿತ್ಸೆಗೆ ನೆರವು ನೀಡುವಂತೆ ಪೋಷಕರು ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದ್ದಾರೆ.

ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಬೇಕಾಗಿದ್ದು, ದಾನಿಗಳು ಸಹಾಯ ಮಾಡುವಂತೆ ಪೋಷಕರು ಕೋರಿದ್ದಾರೆ. ಬ್ಯಾಂಕ್ ಹೆಸರು :- ಕರ್ನಾಟಕ ಬ್ಯಾಂಕ್, ದಾವಣಗೆರೆ ಪಿ.ಬಿ ರಸ್ತೆ ಶಾಖೆ ದಾವಣಗೆರೆ., ಖಾತೆದಾರರ ಹೆಸರು : ಪರಮೇಶ ಯು., ಖಾತೆ ಸಂಖ್ಯೆ: 2142500100 222201., ಐ.ಎಫ್.ಎಸ್.ಸಿ ಕೋಡ್ : ಕೆಎಆರ್‌ಬಿ0000214. ವಿವರಕ್ಕೆ ಸಂಪರ್ಕಿಸುವ ಮೊಬೈಲ್ ಸಂಖ್ಯೆ : 9535790993, 8904168207.

## ಗಂಗನರಸಿ : ನಾಳೆ ಅಮಾವಾಸ್ಯೆ ಪೂಜೆ

ಹರಿಹರ, ಏ.18- ನಾಡಿದ್ದು ದಿನಾಂಕ 20 ರ ಗುರುವಾರ ಅಕ್ಷಯ ತದಿಗೆ ಅಮಾವಾಸ್ಯೆ ಪ್ರಯುಕ್ತ ಹರಿಹರ ತಾಲ್ಲೂಕು ಗಂಗನರಸಿ ಗ್ರಾಮದ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠ ಹಾಗೂ ಶ್ರೀ ಹನುಮಂತದೇವರ ಜೀರ್ಣೋದ್ಧಾರ ಸಮಿತಿಯಿಂದ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 11 ಗಂಟೆಗೆ ಶ್ರೀ ಗೋಣಿ ಬಸವೇಶ್ವರ ಹಾಗೂ ನಾಗದೇವತಾ ಸ್ವಾಮಿಗಳಿಗೆ ವಿಶೇಷ ಪೂಜೆ, ಅಭಿಷೇಕ ಮತ್ತು ಮಹಾಮಂಗಳಾರತಿ ನಡೆಯುವುದು.

ನಂತರ 11.30 ಕ್ಕೆ ಬುಳ್ಳಾಪುರದ ಹನುಮಂತಪ್ಪನವರ ಮಗ ವಿಜಯ ಬುಳ್ಳಾಪುರ, ಹಾವೇರಿ ಜಿಲ್ಲೆ ಚೌಡೇಶ್ವರಿ ನಗರ ರಟ್ಟಿಹಳ್ಳಿಯ ಶ್ರೀಮತಿ ರೇಷ್ಮ ಮತ್ತು ಮಕ್ಕಳು ಇವರುಗಳಿಂದ ಪ್ರಸಾದ ಸೇವಾ ವ್ಯವಸ್ಥೆ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

## ಓದುಗರ ಪತ್ರ

### ಮತಗಟ್ಟೆಗಳು ಹೀಗಿರಬೇಕು..!

**ಮಾನ್ಯರೇ,**

ಮೇ 10ರಂದು ವಿಧಾನಸಭಾ ಚುನಾವಣೆಗೆ ರಾಜ್ಯ ಸಿದ್ದವಾಗುತ್ತಿದೆ. ಮತದಾರ ಬಿರುಬಿಸಿಲನ್ನು ಲೆಕ್ಕಿಸದೆ ಮತದಾನಕ್ಕೆ ಪ್ರಥಮ ಪ್ರಾಶಸ್ತ್ಯ ನೀಡಬೇಕು. ಮತಗಟ್ಟೆಯಲ್ಲಿ ಕುಡಿಯುವ ಶುದ್ಧ ನೀರಿನ ವ್ಯವಸ್ಥೆ, ಬಿಸಿಲಿನಿಂದ ರಕ್ಷಿಸಿಕೊಳ್ಳಲು ಶಾಮಿಯಾನ, ಅಂಗವಿಕಲರಿಗೆ ಗಾಲಿ ಕುರ್ಚಿ, ವೈದ್ಯಕೀಯ ವ್ಯವಸ್ಥೆ, ಸ್ಯಾನಿಟೈಸರ್, ಕೊರೊನಾ ಬಾಧಿತ ಮತಕ್ಷೇತ್ರಗಳ ಮತಗಟ್ಟೆಗಳಲ್ಲಿ ಮಾಸ್ಕ್‌ಗಳನ್ನು ಉಚಿತವಾಗಿ ನೀಡಬೇಕು. ಶೌಚಾಲಯಗಳನ್ನು ಸ್ವಚ್ಛವಾಗಿಟ್ಟು, ಬಳಕೆಗೆ ನೀರಿನ ವ್ಯವಸ್ಥೆ ಇರಲಿ, ಇದನ್ನು ರಾಷ್ಟ್ರೀಯ ಹಬ್ಬದೋಪಾದಿಯಲ್ಲಿ ಸಂಭ್ರಮ, ಸಂತೋಷ ಹಾಗೂ ಕಡ್ಡಾಯವಾಗಿ ಆಚರಿಸಲು ಆಸಕ್ತಿ ತೋರಿಸಬೇಕು.

ಯಾರೂ ಸಹ ಚುನಾವಣಾ ನೀತಿ ಸಂಹಿತೆ ನಿಯಮದ ಉಲ್ಲಂಘನೆ ಆಗದಂತೆ ಎಲ್ಲರೂ ಜವಾಬ್ದಾರಿಯಿಂದ ವರ್ತಿಸಬೇಕು. ಚುನಾವಣೆ ಸಿಬ್ಬಂದಿ ಹಾಗೂ ಪೊಲೀಸರೊಂದಿಗೆ ಸಹಕರಿಸಬೇಕು. ವಿದ್ಯುತ್ ಸಂಪರ್ಕದಲ್ಲಿ ತೊಂದರೆಯಾಗದಂತೆ ಸಂಬಂಧಪಟ್ಟವರಿಗೆ ಜಾಗೃತಿ ಇರಲಿ. ಎಲ್ಲಾ ಮತದಾರರು ಹೆಚ್ಚು ಆಸಕ್ತಿಯಿಂದ ಮತದಾನ ಕಾರ್ಯದಲ್ಲಿ ಭಾಗವಹಿಸಿ, ಚುನಾವಣೆ ಕಾರ್ಯ ಯಶಸ್ವಿಯಾಗುವಂತೆ ಶ್ರದ್ದೆ ಹಾಗೂ ಪ್ರೀತಿ ತೋರಿಸಲಿ.

**- ಜೆ. ಎಸ್. ಚಂದ್ರನಾಥ , ನೀಲಾನಹಳ್ಳಿ**

# ಎಸ್.ಎಸ್. ವೈದ್ಯಕೀಯ ಕಾಲೇಜಿನಲ್ಲಿ ಕಾರ್ನಿಯಾ ಕಾರ್ಯಾಗಾರ

ದಾವಣಗೆರೆ, ಏ.18- 'ನೇತ್ರದಾನ ಮಹಾದಾನ' ನಮ್ಮೆಲ್ಲರಿಗೂ ತಿಳಿದಿರುವಂತೆ ಒಬ್ಬ ವ್ಯಕ್ತಿ ನೇತ್ರದಾನ ಮಾಡಿದ ನಂತರ ಆ ಕಣ್ಣಿನ ಬಹುಮುಖ್ಯ ಭಾಗವಾದ ಕರಿಗುಡ್ಡೆ (ಕಾರ್ನಿಯಾ)ಯನ್ನು ಮತ್ತೊಬ್ಬ ಕಾರ್ನಿಯ ಅಂಧತ್ವದಿಂದ ಬಳಲುತ್ತಿರುವ ವ್ಯಕ್ತಿಗೆ ಕಸಿ ಮಾಡಲಾಗುತ್ತದೆ.


ನಮ್ಮ ದೇಶದಲ್ಲಿ ಸುಮಾರು 1.6 ಮಿಲಿಯನ್ ನಷ್ಟು ಜನರು ಒಂದು ಕಣ್ಣಿನ ಕಾರ್ನಿಯಾ ಅಂಧತ್ವದಿಂದ ಬಳಲುತ್ತಿದ್ದಾರೆ. ಸುಮಾರು ಒಂದು ಮಿಲಿಯನ್ ನಷ್ಟು ಜನ ಎರಡೂ ಕಣ್ಣಿನ ಕಾರ್ನಿಯಾ ಅಂಧತ್ವದಿಂದ ಬಳಲುತ್ತಿದ್ದಾರೆ.

ಇಂತಹ ಕಣ್ಣಿನ ಬಹುಮುಖ್ಯ ಭಾಗವಾದ ಕರಿಗುಡ್ಡೆ (ಕಾರ್ನಿಯ) ಕುರಿತು ರಾಜ್ಯದ ಹಲವು ನುರಿತ ತಜ್ಞ ವೈದ್ಯರಿಂದ ಮುಂದುವರೆದ ವೈದ್ಯಕೀಯ ಶಿಕ್ಷಣ ಶಿಬಿರವನ್ನು (ಕಂಟಿನ್ಯೂಡ್ ಮೆಡಿಕಲ್ ಎಜುಕೇಷನ್) ನಗರದ ಎಸ್.ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನಡೆಸಲಾಯಿತು.

ಈ ಕಾರ್ಯಾಗಾರದಲ್ಲಿ ಕಾರ್ನಿಯಾದಲ್ಲಿನ ಸೋಂಕುಗಳು ಕಣ್ಣಿಗೆ ಪೆಟ್ಟು, ಸುಣ್ಣ ಇತ್ಯಾದಿ ರಾಸಾಯನಿಕ ವಸ್ತುಗಳಿಂದ ಆಗುವ ಹಾನಿ ಕೆರಾಟೋಕೋನಸ್ ಹಾಗೂ ಕಾರ್ನಿಯಾದ ಅತ್ಯುನ್ನತ ಪರೀಕ್ಷಾ ವಿಧಾನಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸಲಾಯಿತು.

ಕಾಲೇಜಿನ ವೈದ್ಯಕೀಯ ನಿರ್ದೇಶಕ ಡಾ|| ಅರುಣ್ ಕುಮಾರ್ ಅಜ್ಜಪ್ಪ, ಹಿರಿಯ ನೇತ್ರ ತಜ್ಞ ಡಾ|| ರವೀಂದ್ರ ಬಣಕಾರ್, ಡಾ|| ಸೂರ್ಯ ಪ್ರಕಾಶ್, ಡಾ|| ಸುರೇಂದ್ರ ಶೆಟ್ಟಿ, ಡಾ|| ಹಿರೇಮಠ್, ವಿಭಾಗದ ಮುಖ್ಯಸ್ಥರಾದ ಡಾ|| ಅಜಯ್ ಎಸ್. ಹತ್ತಿ ಮತ್ತು ಇತರರು ಈ ಕಾರ್ಯಾಗಾರವನ್ನು ನಡೆಸಿಕೊಟ್ಟರು.

ಡಾ|| ಶಾಂತಲಾ ಅರುಣ್ ಕುಮಾರ್ ಸ್ವಾಗತಿಸಿದರು. ಡಾ|| ರೇಣುಕಾ ಬರ್ಕಿ ವಂದಿಸಿದರು.



# ಬಸವ ಜಯಂತಿ: ನಗರದಲ್ಲಿ ಇಂದು ಪ್ರಭಾತ್‌ಪೇರಿ



112ನೇ ವರ್ಷದ ಬಸವ ಜಯಂತ್ಯೋತ್ಸವದ ಪ್ರಯುಕ್ತ ಶ್ರೀ ವಿರಕ್ತ ಮಠ ಮತ್ತು ಲಿಂಗಾಯತ ತರುಣ ಸಂಘ ಇವರ ಜಂಟಿ ಆಶ್ರಯದಲ್ಲಿ ಬಸವ ಪ್ರಭಾತ್ ಪೇರಿಯನ್ನು ಇಂದಿನಿಂದ ಹಮ್ಮಿಕೊಳ್ಳಲಾಗಿದ್ದು, ಇದೇ ದಿನಾಂಕ 23ರವರೆಗೆ ನಡೆಯಲಿದೆ.

ಪ್ರತಿದಿನ ಬೆಳಿಗ್ಗೆ 7.30 ಕ್ಕೆ ನಗರದ ವಿವಿಧ ಬಡಾವಣೆಗಳಲ್ಲಿ ಜರುಗಲಿದ್ದು, ಪ್ರಭಾತ್ ಪೇರಿಗೆ ಬಸವ ಕಲಾ ಲೋಕ ಪ್ರತಿನಿತ್ಯ ವಚನ ಭಜನೆ ಸಾಥ್ ನೀಡಲಿದೆ. ಶ್ರೀ ವಿರಕ್ತ ಮಠ - ಶ್ರೀ ಶಿವಯೋಗಾ ಶ್ರಮದ ಶ್ರೀ ಬಸವಪ್ರಭು ಸ್ವಾಮೀಜಿ ನೇತೃತ್ವ ವಹಿಸುವರು.

ಇಂದು ಮದಕರಿ ನಾಯಕ ವೃತ್ತ, ಜಾಲಿನಗರ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಬಸವ ಪ್ರಭಾತ್ ಪೇರಿ ಸಂಚರಿಸಲಿದೆ.

ನಾಳೆ ಗುರುವಾರ ಮದಕರಿ ನಾಯಕ ವೃತ್ತ, ಛಲವಾದಿ ಕೇರಿ, ದಿನಾಂಕ 21ರ ಶುಕ್ರವಾರ ಮದಕರಿ ನಾಯಕ ವೃತ್ತ, ತಳವಾರ ಕೇರಿ, ಕಾಳಿಕಾದೇವಿ ರಸ್ತೆ, ದಿನಾಂಕ 22ರ ಶನಿವಾರ ಕಾಳಿಕಾದೇವಿ ರಸ್ತೆ, ಆನೆಕೊಂಡ ಪೇಟೆ, ಹಳೇಪೇಟೆ, ಎಸ್.ಕೆ.ಪಿ. ರಸ್ತೆಯಿಂದ ವಿರಕ್ತ ಮಠ ತಲುಪಲಿದೆ.

ಬಸವ ಪ್ರಭಾತ್ ಪೇರಿಯಲ್ಲಿ ಭಾಗವಹಿಸಲಿಚ್ಛಿಸುವವರು ವಿವರಕ್ಕೆ ಮೊಬೈಲ್ 96118-89151 ರಲ್ಲಿ ಸಂಪರ್ಕಿಸುವಂತೆ ಲಿಂಗಾಯತ ತರುಣ ಸಂಘದ ಸಂಚಾಲಕ ಕಣಕುಪ್ಪಿ ಮುರುಗೇಶಪ್ಪ ಕೋರಿದ್ದಾರೆ.

## ನಾಳೆ ಮಕ್ಕಳಿಗೆ ಬೇಸಿಗೆ ಶಿಬಿರ

ದಾವಣಗೆರೆ, ಏ. 18- ನೇತಾಜಿ ಸ್ಕೌಟ್ಸ್ ಗ್ರೂಪ್ ಮತ್ತು ಚೇತನ ಗೈಡ್ ಗ್ರೂಪ್ ವತಿಯಿಂದ ನಾಡಿದ್ದು ದಿನಾಂಕ 20 ರಿಂದ 29 ರವರೆಗೆ ವಿವಿಧ ಕಾರ್ಯಕ್ರಮಗಳನ್ನೊಳಗೊಂಡ ಬೇಸಿಗೆ ಶಿಬಿರ ಆಯೋಜಿಸ ಲಾಗಿದೆಎಂದು ನೇತಾಜಿ ಸ್ಕೌಟ್ಸ್ ಗ್ರೂಪ್ ನಾಯಕ ಜೆ.ಎಸ್. ವಿಜಯ್, ಚೇತನ್ ಗೈಡ್ ಗ್ರೂಪ್ ನಾಯಕರಾದ ಕಾವೇರಿ ತಿಳಿಸಿದ್ದಾರೆ.

## ಕೊಟ್ಟೂರು : ತಹಶೀಲ್ದಾರ್ ಅವರಿಂದ ವಾಹನ ತಪಾಸಣೆ



ಕೊಟ್ಟೂರು, ಏ.18- ಸಾರ್ವತ್ರಿಕ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ತಹಶೀಲ್ದಾರ್ ಕುಮಾರಸ್ವಾಮಿ ಅವರು ಎಸ್.ಎಸ್.ಟಿ ಟೀಮ್ ಜೊತೆಗೆ ಉಜ್ಜಿನಿ ಹಾಗೂ ಹರಾಳು ಚೆಕ್ ಪೋಸ್ಟ್‌ನಲ್ಲಿ ವಾಹನ ತಪಾಸಣೆ ನಡೆಸಿದರು.

**ST. MARY'S CONVENT SCHOOL & PU COLLEGE**

**SCIENCE & COMMERCE**

Vinobha Nagar, 4th Main, 1st Cross, Davangere.
Ph. : 94497 02778, 94819 09493

**WANTED TEACHERS**

1) B.Sc., B.Ed., Maths - 4 Posts
2) BA., B.Ed., MA., (English Majar) - 2 Posts
3) BA., B.Ed., Social - 2 Posts
4) BSc., B.Ed., CPZ - 3 Posts
5) P.T. Teachers - 2 Posts
6) B.Sc., CS, (Computer Teachers) - 2 Posts
7) BA., B.Ed., (Hindi Majar) - 1 Post

Admission Started on 17.04.2023, LKG to 9th Std., PUC
Science & Commerce Extra Coching for CET & NEET Classes

Requirement for the Acadamic year 2023-24
Fluent in English Freshers and Experience Teachers

**ಘನ ಪ್ರಿನ್ಸಿಪಾಲ್ ಡಿಸ್ಟ್ರಿಕ್ಟ್ ಅಂಡ್ ಸೆಷನ್ಸ್ ಜಡ್ಜ್‌ರವರ ನ್ಯಾಯಾಲಯ ದಾವಣಗೆರೆಯವರ ಸಮ್ಮುಖದಲ್ಲಿ**

ಎ.ಎಸ್. 2/2020

ಅರ್ಜಿದಾರರು : ನ್ಯಾಷನಲ್ ಹೈ ವೇಸ್ ಅಥಾರಿಟಿ ಆಫ್ ಇಂಡಿಯಾ - ವಿರುದ್ಧ -
ಪ್ರತಿವಾದಿಗಳು : ಆರ್ಬಿಟ್ರೇಟರ್ & ಜಿಲ್ಲಾಧಿಕಾರಿಗಳು & ಇತರೆಯವರು

**ಪ್ರಕಟಣೆ**

**ಸಿ.ಪಿ.ಸಿ. ಆರ್ಡರ್ 5, ರೂಲ್ 20 (1-A) ರೆಡ್ ವಿತ್ ಸೆಕ್ಷನ್ 151 ಪ್ರಕಾರ – ಮಧ್ಯಂತರ ಅರ್ಜಿ ಆದೇಶನುಸಾರ ಪ್ರಕರಣದ ರೆಸ್ಪಾಂಡೆಂಟ್ಸ್ ನಂ. 5 (ಎ) ಇಂದ 5 (ಸಿ) ರವರುಗಳಿಗೆ ನೋಟೀಸ್**

ಮೇಲ್ಕಂಡ ಘನ ನ್ಯಾಯಾಲಯದ ಪ್ರಕರಣದಲ್ಲಿನ ರೆಸ್ಪಾಂಡೆಂಟ್ಸ್ ನಂ. 5 (ಎ) ಇಂದ 5 (ಸಿ) ರವರಾದ ಶ್ರೀಮತಿ ಶಶಿಕಲಾ ಪಿ.ವಿ. ಬಿನ್ ಲೇಟ್ ಗೌರಮ್ಮ ಸಿ.ವೈ, ಶ್ರೀಮತಿ ನಂದಿನಿ ಪಿ.ವಿ. ಬಿನ್ ಲೇಟ್ ಗೌರಮ್ಮ ಸಿ.ವೈ. ಮತ್ತು ಶ್ರೀಮತಿ ನಾಗಮಣಿ ಪಿ.ವಿ. ಬಿನ್ ಲೇಟ್ ಗೌರಮ್ಮ ಸಿ.ವೈ, ಎಲ್ಲರೂ ಕಲ್ಲೇದೇವರಪುರ ಗ್ರಾಮ, ಜಗಳೂರು ತಾಲ್ಲೂಕ್ ವಾಸಿಗಳು, ಇವರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ ;- ಸದರಿ ಪ್ರಕರಣದಲ್ಲಿ - ಜಗಳೂರು ತಾಲ್ಲೂಕ್, ಕಲ್ಲೇದೇವರಪುರ ಗ್ರಾಮದ ಸರ್ವೆ ನಂ. 2/1ಎ3 ರಲ್ಲಿ 707 ಚದರ ಮೀಟರ್ಸ್ ಭೂಮಿಯನ್ನು ಪ್ರಕರಣದ ಅರ್ಜಿದಾರರು ಕೇಂದ್ರ ಸರ್ಕಾರದ ಪರವಾಗಿ ನ್ಯಾಶನಲ್ ಹೈ ವೇಸ್ ಆಕ್ಟ್ 1956 ಸೆಕ್ಷನ್ 3(ಡಿ) ಪ್ರಕಾರ, ಸದರಿ ತಮ್ಮಗಳೆಲ್ಲರವರ ತಾಯಿಯವರಾದ ಲೇಟ್ ಶ್ರೀಮತಿ ಗೌರಮ್ಮ ಸಿ.ವೈ. ಇವರಿಂದ ಭೂ-ಸ್ವಾಧೀನ ಪಡಿಸಿಕೊಂಡಿದ್ದು, ನಂತರ ಸದರಿ ಶ್ರೀಮತಿ ಗೌರಮ್ಮ ಸಿ.ವೈ. ರವರು, ಸದರಿ ಭೂ-ಸ್ವಾಧೀನದ ಬಗ್ಗೆ ಹೆಚ್ಚಿನ ಪರಿಹಾರ ಕೋರಿ ಆರ್ಬಿಟ್ರೇಟರ್ ಮತ್ತು ಜಿಲ್ಲಾಧಿಕಾರಿಗಳು, ದಾವಣಗೆರೆಯವರಲ್ಲಿ ಕೇಸ್ ನಂ. ಎಲ್.ಎ.ಕ್ಯೂ.ಎ.ಆರ್.ಬಿ. ಜಗಳೂರು 35/17-18 ರ ಪ್ರಕಾರ ಅರ್ಜಿ ಸಲ್ಲಿಸಿದ್ದು, ಆ ಅರ್ಜಿಯ ಮೇಲೆ ಸದರಿ ಆರ್ಬಿಟ್ರೇಟರ್ ಮತ್ತು ಜಿಲ್ಲಾಧಿಕಾರಿಗಳು, ದಾವಣಗೆರೆಯವರು ತಾ. 20-1-2020 ರಂದು ಹೊರಡಿಸಿದ ಆದೇಶ / ಅವಾರ್ಡ್ ವಿರುದ್ಧ, ಸದರಿ ಅರ್ಜಿದಾರರು, ಸದರಿ ಘನ ನ್ಯಾಯಾಲಯದ ಸಮ್ಮುಖದಲ್ಲಿ ಅಪೀಲ್ / ಪ್ರಕರಣವನ್ನು ಸಲ್ಲಿಸಿದ್ದು - ಸದರಿ ಪ್ರಕರಣದಲ್ಲಿ ತಮ್ಮಗ್ಳ ತಾಯಿಯವರು ಪೌತಿಯಾದ ಕಾರಣ, ಅವರ ವಾರಸುದಾರರಾಗಿ ತಮ್ಮಗಳನ್ನು ಪಾರ್ಟಿಗಳನ್ನಾಗಿ ಮಾಡಿದ್ದು, ತಾವುಗಳೂ ಸಹ ಪ್ರಕರಣದಲ್ಲಿ ಪಾಲ್ಗೊಳ್ಳುವಂತೆ ಸದರಿ ಘನ ನ್ಯಾಯಾಲಯವು - ಈ ಮೂಲಕ ತಮಗೆ ನಿರ್ದೇಶಿಸುವುದೇನೆಂದರೆ, ತಾರೀಖು 05.06.2023 ರಂದು ಬೆಳಿಗ್ಗೆ 11.00 ಗಂಟೆಗೆ-ತಾವೇ ಖುದ್ದಾಗಲೀ ಅಥವಾ ತಮ್ಮ ಪರ ವಕೀಲರಾಗಲೀ ಹಾಜರಾಗಿ, ಸದರಿ ಪ್ರಕರಣದ ಬಗ್ಗೆ ತಮ್ಮ ತಕರಾರು/ಅಹವಾಲು ಮತ್ತು ಸಾಕ್ಷಿ, ಪುರಾವೆಗಳನ್ನು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ, ಸದರಿ ಘನ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ತಮ್ಮನ್ನು ಏಕ ಪಕ್ಷೀಯ ಮಾಡಿ ಪ್ರಕರಣವನ್ನು ನಿಮ್ಮ ಗೈರು ಹಾಜರಿಯಲ್ಲಿ ಇತ್ಯರ್ಥಗೊಳಿಸಲಾಗುವುದು ತಿಳಿಯಿರಿ.

ಘನ ನ್ಯಾಯಾಲಯದ ಆದೇಶದ ಮೇರೆಗೆ ಈ ಕೆಳಗೆ ನನ್ನ ಸಹಿಯೊಂದಿಗೆ ನ್ಯಾಯಾಲಯದ ಮೊಹರೆನಿಸಿ, ದಿನಾಂಕ 18.04.2023 ರಂದು ನೀಡಿದ ನೋಟೀಸ್.

ಸಹಿ /- ಎಸ್. ಸಿದ್ಧವೀರಪ್ಪ,
ಬಿ. ಕಾಂ., ಎಲ್‌ಎಲ್, ಬಿ.
ಅರ್ಜಿದಾರ ಪರ ವಕೀಲರು,
ಪಿ.ಜೆ. ಬಡಾವಣೆ, ದಾವಣಗೆರೆ. 17.4.2023

ಘನ ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ /- ಮುಖ್ಯ ಆಡಳಿತಾಧಿಕಾರಿಗಳು
ಪ್ರಿನ್ಸಿಪಾಲ್ ಡಿಸ್ಟ್ರಿಕ್ಟ್ ಅಂಡ್ ಸೆಷನ್ಸ್ ಜಡ್ಜ್‌ರವರ
ನ್ಯಾಯಾಲಯ, ದಾವಣಗೆರೆ

## ನಗರ ದೇವತೆಯ ಕೃಪಾಶೀರ್ವಾದ ಪಡೆದ ನಾಗರಾಜ್ ಲೋಕಿಕೆರೆ



ದಾವಣಗೆರೆ, ಏ. 18 - ಉತ್ತರ ವಿಧಾನಸಭಾ ಕ್ಷೇತ್ರದ ಜನರ ಸೇವೆಯ ಅವಕಾಶ ಬಯಸಿ ಈ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ನಾಗರಾಜ್ ಲೋಕಿಕೆರೆ ಅವರು ತಮಗೆ ಜನ ಆಶೀರ್ವಾದ ಸಿಗಲೆಂದು ನಗರ ದೇವತೆಯ ಕೃಪಾಶೀರ್ವಾದ ಪಡೆದರು.

ಇಂದು ಮುಂಜಾನೆ ನಾಗರಾಜ್ ಲೋಕಿಕೆರೆ ದಂಪತಿ ಶಕ್ತಿ ದೇವತೆಯಾಗಿರುವ ನಗರ ದೇವತೆ ಶ್ರೀ ದುರ್ಗಾಂಬಿಕ ದೇವಿಯ ದೇವಸ್ಥಾನಕ್ಕೆ ತೆರಳಿ, ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು.

ತಾಯಿಯ ಸನ್ನಿಧಿಯ ಗರ್ಭಗುಡಿಯಲ್ಲಿ ನಾಗರಾಜ್ ಲೋಕಿಕೆರೆ ಅವರು ಧರ್ಮಪತ್ನಿ ಶ್ರೀಮತಿ ಲತಾ ನಾಗರಾಜ್ ಲೋಕಿಕೆರೆ ಜೊತೆಗೂಡಿ ದೇವಿಯ ಮೂರ್ತಿಗೆ ಸ್ವತಃ ಅಭಿಷೇಕ ನೆರವೇರಿಸಿದರು. ಅಲ್ಲದೇ ವಿಶೇಷ ಪೂಜೆ ಸಲ್ಲಿಸಿ, ಭಕ್ತಿ ಮೆರೆದು ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಗೆಲುವು ಕಂಡು ಜನರ ಸೇವೆಯ ಅವಕಾಶ ನೀಡುವಂತೆ ಕೃಪಾಶೀರ್ವಾದ ಬೇಡಿದರು. ಈ ಸಂದರ್ಭದಲ್ಲಿ ನಾಗರಾಜ್ ಲೋಕಿಕೆರೆ ಆಪ್ತರಾದ ಜಿ.ಎಸ್. ಪರಶುರಾಮ್, ಆಪ್ತ ಸಹಾಯಕ ವಿನಯ್ ಇದ್ದರು.

## ಎಸ್ಸೆಸ್ಸೆಂಗೆ ರಂಭಾಪುರಿ ಶ್ರೀ ಆಶೀರ್ವಾದ



ದಾವಣಗೆರೆ, ಏ. 18- ಖಾಸಗಿ ಕಾರ್ಯಕ್ರಮ ನಿಮಿತ್ತ ಮೊನ್ನೆ ನಗರಕ್ಕಾಗಮಿಸಿದ್ದ ರಂಭಾಪುರಿ ಪೀಠದ ಜಗದ್ಗುರುಗಳು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಆಶೀರ್ವದಿಸಿದರು.

# ಅಂಬೇಡ್ಕರ್ ಸಂವಿಧಾನದಿಂದಲೇ ಭಾರತಕ್ಕೆ ಜಾಗತಿಕ ಮಾನ್ಯತೆ

### ಚಿಂತಕ ಪ್ರೊ. ರಾಮಚಂದ್ರಪ್ಪ

ದಾವಣಗೆರೆ, ಏ. 18- ಭಾರತಕ್ಕೆ ಜಾಗತಿಕ ಮಾನ್ಯತೆ ಇದೆ ಎಂದರೆ ಅದಕ್ಕೆ ಪ್ರಮುಖ ಕಾರಣ ಅಂಬೇಡ್ಕರ್ ಮತ್ತು ಅವರು ನೀಡಿದ ಸಂವಿಧಾನದ ಫಲದಿಂದಲೇ ಹೊರತು, ಯಾವುದೇ ಒಬ್ಬ ರಾಜಕಾರಣಿ, ಒಂದು ಸರ್ಕಾರದಿಂದ ಅಲ್ಲ ಎಂಬುದನ್ನು ಮನಗಾಣಬೇಕು ಎಂದು ಪ್ರಗತಿಪರ ಚಿಂತಕ ಪ್ರೊ.ಎ.ಬಿ. ರಾಮಚಂದ್ರಪ್ಪ ಹೇಳಿದರು.

ಇಲ್ಲಿನ ಕೆಟಿಜೆ ನಗರದ ಶ್ರೀ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಯುವ ಸ್ನೇಹ ಬಳಗ, ಸ್ವರ ಸಮ್ಮಿಲನ ಹಾಗೂ ರಂಗ ಅನಿಕೇತನ ಸಂಸ್ಥೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅಂಬೇಡ್ಕರ್ ಹಬ್ಬ ಹಾಗೂ 'ಬೆಳಕು ಹಂಚಿದ ಬಾಲಕ' ನಾಟಕ ಪ್ರದರ್ಶನದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎರಡು ಸಾವಿರ ವರ್ಷಗಳಿಂದ ನಿರಂತರವಾಗಿ ದಾಸ್ಯಕ್ಕೆ ಈಡಾಗಿದ್ದ ಸಮುದಾಯಗಳ ವಿಮೋಚನೆ, ಮಹಿಳೆಯರು, ಕಾರ್ಮಿಕರ ವಿಮೋಚನೆಯನ್ನು ಸಂವಿಧಾನದ ಮೂಲಕ ಸಾಕಾರಗೊಳಿಸಿದರು. ಇಂದು ಭಾರತ ಸಾರ್ವಭೌಮತ್ವ, ಭ್ರಾತೃತ್ವ, ಸೋದರತೆ, ಮಾನವೀಯತೆಯಿಂದ ಪ್ರಕಾಶಿಸುತ್ತಿದೆ ಎಂದರೆ ಅದಕ್ಕೆ ಮುಖ್ಯ ಕಾರಣ ಅಂಬೇಡ್ಕರ್ ಎಂಬದನ್ನು ಮರೆಯಬಾರದು ಎಂದರು.



ರಾಜಕೀಯದಲ್ಲಿ ಧರ್ಮ ಬೆರೆಸಬಾರದು. ಒಂದು ವೇಳೆ ಇದು ಸಾಧ್ಯವಾದರೆ ಸನಾತನವಾದಿಗಳು, ಕೋಮುವಾದಿ ಗಳು ಧರ್ಮಾಂಧರು ಹೆಚ್ಚಾಗಿ ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುವರು. ಮೌಢ್ಯ ಹೆಚ್ಚಾಗುತ್ತದೆ ಎಂದು ಅಂದೇ ಎಚ್ಚರಿಸಿದ್ದರು.

ರಾಜಕೀಯ ಮತ್ತು ಧರ್ಮದ ಅನೈತಿಕ ಸಂಬಂಧದಿಂದಾಗಿ ಸ್ವಾತಂತ್ರ್ಯ, ಸಮಾನತೆಗಳು ಅಪಾಯಕ್ಕೆ ಸಿಲುಕಿವೆ ಎಂದು ವಿಷಾದಿಸಿದರು.

ಅಂಬೇಡ್ಕರ್ ಜಯಂತಿ ಎಂದರೆ ಬಹುಜನರ ಹಕ್ಕಿನ ಉದಯದ ದಿನವೂ ಹೌದು. ಮೇಲ್ಜಾತಿಗಳ ಮನಪರಿವರ್ತನೆಯ ದಿನವೂ ಹೌದು. ಅಂಬೇಡ್ಕರ್ ಜಯಂತಿ ಕೇವಲ ಆಚರಣೆ ಮಾತ್ರವಲ್ಲ, ಶೋಷಿತರ ಜಾಗೃತಿಯ ದಿನ ಎಂಬುದನ್ನು ಅರಿಯಬೇಕಿದೆ. ಇಂತಹ ಮಹತ್ವದ ಜಯಂತಿಯನ್ನು ಸರ್ಕಾರ ಕೈಬಿಟ್ಟಿರುವುದನ್ನು ಯಾರೂ ಸಮ್ಮತಿಸಲಾರರು. ಸರ್ಕಾರದ ಈ ನಡೆಯನ್ನು ವಿರೋಧಿಸಿದರು.

ಸತತ ಪರಿಶ್ರಮ, ಅಧ್ಯಯನದಿಂದ ನಿರ್ದಿಷ್ಟ ಗುರಿ ಸಾಧನೆ ಸಾಧ್ಯ. ಮಕ್ಕಳ ಶಿಕ್ಷಣದ ಬಗ್ಗೆ ಗಂಭೀರ ಚಿಂತನೆ ಅತ್ಯಗತ್ಯ ಎಂದು ಹಾವೇರಿ ಜಿಲ್ಲಾ ಗ್ರಾಹಕರ ಆಯೋಗದ ನಿಕಟಪೂರ್ವ ನ್ಯಾಯಾಧೀಶರಾದ ಸುನಂದ ದುರುಗೇಶ್ ಹೇಳಿದರು. ಯಾವುದೇ ಆಸೆ, ಆಮಿಷಗಳಿಗೆ ಬಲಿಯಾಗದೇ ಜನಪರ ಕೆಲಸ ಮಾಡುವಂತಹ ಸೂಕ್ತ ವ್ಯಕ್ತಿಗೆ ಮತ ಹಾಕುವಂತೆ ಮನವಿ ಮಾಡಿದರು.

ರಂಗ ನಿರ್ದೇಶಕ ದೇವರಾಜ್ ಮಳೇಹಳ್ಳಿ ಮಾತನಾಡಿದರು. ದಲಿತ ಮುಖಂಡರಾದ ಸೋಮಲಾಪುರದ ಹನುಮಂತಪ್ಪ, ವಕೀಲರಾದ ಹೆಚ್.ಎನ್. ಸುಧಾ, ರಮೇಶ್ ಕುಷ್ಟಗಿ, ಹೆಚ್. ದುರುಗೇಶ್ ಗುಡಿಗೇರಿ, ನಾಗೇಂದ್ರ ಬಂಡೀಕರ್ ಮತ್ತಿತರರು ಉಪಸ್ಥಿತರಿದ್ದರು.

ಸ್ವರ ಸಮ್ಮಿಲನ ತಂಡದವರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಾಗೂ ರಂಗ ಅನಿಕೇತನ ಶಿಬಿರದ ಮಕ್ಕಳಿಂದ 'ಬೆಳಕು ಹಂಚಿದ ಬಾಲಕ' ನಾಟಕ ಪ್ರದರ್ಶನಗೊಂಡಿತು.

## 5ನೇ ವಾರ್ಡ್‌ನಲ್ಲಿ ಎಸ್ಸೆಸ್ ಭರ್ಜರಿ ಪ್ರಚಾರ

ದಾವಣಗೆರೆ, ಏ. 18- ಮಹಾನಗರ ಪಾಲಿಕೆ ವ್ಯಾಪ್ತಿಯ 5 ನೇ ವಾರ್ಡಿನಲ್ಲಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಡಾ. ಶಾಮನೂರು ಶಿವಶಂಕರಪ್ಪ ಅವರು ಮನೆ-ಮನೆಗೆ ತೆರಳಿ ಪ್ರಚಾರ ನಡೆಸಿದರು.

ಎಸ್.ಪಿ.ಎಸ್.ನಗರದ ಶ್ರೀ ಗೌರಸಂದ್ರ ಮಾರಮ್ಮ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ 5ನೇ ವಾರ್ಡ್‌ನ ಎಸ್.ಪಿ.ಎಸ್.ನಗರ 1 ಮತ್ತು 2 ನೇ ಹಂತ ಮತ್ತು ಬಾಬು ಜಗಜೀವನ ರಾಂ ನಗರ ಸೇರಿದಂತೆ, ವಿವಿಧ ಭಾಗಗಳಲ್ಲಿ ಮತ ಯಾಚಿಸಲಾಯಿತು.



ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯೆ ಸುಧಾ ಇಟ್ಟಿಗುಡಿ ಮಂಜುನಾಥ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಬೆಲ್ಲದ ಶಂಕರ್, ಸೀಮೆಎಣ್ಣೆ ಮಲ್ಲೇಶ್, ಹೆಚ್.ಜಯಣ್ಣ, ಮಾಲತೇಶ್ ಪೈಲ್ವಾನ್, ಹನುಮಂತರಾವ್, ನಗರಸಭೆ ಮಾಜಿ ಅಧ್ಯಕ್ಷ ಎಂ.ಮಂಜುನಾಥ, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಅನಿತಾಬಾಯಿ ಮಾಲತೇಶ್, ಬ್ಲಾಕ್ ಅಧ್ಯಕ್ಷೆ ಶುಭಮಂಗಳ, ಓಬಿಸಿ ರಾಜ್ಯ ಕಾರ್ಯದರ್ಶಿ ಜಮ್ನಳ್ಳಿ ನಾಗರಾಜ್, ಚಂದ್ರು ದೀಟೂರು, ಸೇವಾದಳದ ಡೋಲಿ ಚಂದ್ರು ನೇತೃತ್ವ ವಹಿಸಿದ್ದರು.

ಮುಖಂಡರುಗಳಾದ ಆರ್. ವಾಸುದೇವ್, ಇಟ್ಟಿಗುಡಿ ಆನಂದ್,ಕೊಂಡಜ್ಜಿ ರೋಡ್ ಲಿಂಗರಾಜ್, ಪರಶುರಾಮ್, ರಂಗನಾಥ್, ಅಣ್ಣಪ್ಪ, ವಿಜಯಣ್ಣ, ದೇವರಾಜ್ ಸ್ವಾಮಿ, ಸ್ವಾಮಿ ನಾಯ್ಕ, ಕೆ.ಬಿ.ರುದ್ರೇಶ್, ಕೆ.ಸಿ. ಮಂಜುನಾಥ್, ಗುರು, ಸಂತೋಷ್, ಅಶೋಕ್, ಮೋಹನ್, ಹೋಟೆಲ್ ರವಿ, ಹೋಟೆಲ್ ಬಸಣ್ಣ, ಕೆ.ಎಸ್.ಬಸವ ರಾಜ್, ಅಯೂಬ್, ಮಂಜಯ್ಯ, ಆರ್. ಹೆಚ್.ಮಂಜುನಾಥ್, ನಿಂಗೋಜಿ ರಾವ್, ಶೌಕತ್, ಜಿಲಾನಿ, ಬಸವರಾಜ್, ಬಸ್ ಮಂಜಣ್ಣ, ನಾಗಭೂಷಣ್, ಮಿಥುನ್, ಅಜ್ಜಪ್ಪ, ಹರೀಶ್, ಕವಿರಾಜ್, ಮಂಜುನಾಥ್, (ಪಲವ) ಮಂ ಜಮ್ಮ, ಕಮಲಮ್ಮ, ಗೀತಾ ಚಂದ್ರ ಶೇಖರ್, ಬಸಮ್ಮ, ಹೇಮಾವತಮ್ಮ, ಆತರಬೀ, ಭಾರತಿ, ನೂರಜ್ಜಿ, ಪೈಲ್ವಾನ್ ಹನುಮಂತಪ್ಪ, ಬಕ್ಕಣ್ಣ, ಕುಂಬಾರ ಅಜ್ಜಪ್ಪ, ಸೊಸೈಟಿ ಮಂಜುನಾಥ್, ಕಾರ್ಯಕರ್ತರು ಮತ್ತು ಅಭಿಮಾನಿಗಳು ಭಾಗವಹಿಸಿದ್ದರು.

## ಕೃಷಿ ಸಂಘಕ್ಕೆ ರಮೇಶ್ ಅಧ್ಯಕ್ಷ



ದಾವಣಗೆರೆ, ಏ. 18 - ಆನೆಕೊಂಡದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಎಸ್.ಪಿ. ರಮೇಶ್ ಲಿಂಗದಹಳ್ಳಿ ಅವರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.


ಹೃತ್ಪೂರ್ವಕ ಕೃತಜ್ಞತೆಗಳು

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಆನೆಕೊಂಡ ಇದರ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ನನ್ನನ್ನು ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲು ಸಹಕರಿಸಿದ ಬ್ಯಾಂಕಿನ ಎಲ್ಲಾ ನಿರ್ದೇಶಕರುಗಳಿಗೂ, ಲಿಂಗದಹಳ್ಳಿ, ಆನೆಕೊಂಡ, ಬಸಾಪುರ, ರಾಂಪುರ ಗ್ರಾಮದ ಗ್ರಾಮಸ್ಥರುಗಳಿಗೂ, ಮುಖಂಡರುಗಳಿಗೂ, ಪ್ರತ್ಯಕ್ಷ, ಪರೋಕ್ಷವಾಗಿ ಸಹಕರಿಸಿರುವವರೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು.



ಎಸ್.ಪಿ. ರಮೇಶ್ ಲಿಂಗದಹಳ್ಳಿ
ಅಧ್ಯಕ್ಷರು,
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಆನೆಕೊಂಡ.


## ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಅಮಾವಾಸ್ಯೆ



ದಾವಣಗೆರೆ, ಏ.18- ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನ ದಲ್ಲಿ ನಾಡಿದ್ದು ದಿನಾಂಕ 20ರ ಗುರುವಾರ ಅಕ್ಷಯ ತದಿಗೆ ಅಮಾವಾಸ್ಯೆ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಅಂದು ಬೆಳಿಗ್ಗೆ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ, ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ, ಪ್ರಸಾದ ವಿನಿಯೋಗ ನಡೆಯುವುದು. ಸುಧಾ ಜಿ.ಸಿ. ಈಶ್ವರಪ್ಪ, ಚಿ. ನಾಗರಾಜ್, ಚಿ. ಅನುಷಾ ಹಾಗು ಕುಟುಂಬ ದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ದಕ್ಷಿಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರಚಾರಕ್ಕೆ ಇಂದು ಚಾಲನೆ



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಜಿ.ಅಜಯ್ ಕುಮಾರ್ ಇಂದು ಬೆಳಿಗ್ಗೆ 7 ಗಂಟೆಗೆ ಕಾಯಿಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಪ್ರಚಾರವನ್ನು ಆರಂಭಿಸಲಿದ್ದಾರೆ.

ಬೆಳಗ್ಗೆ 10.30ಕ್ಕೆ ಕಾಯಿಪೇಟೆಯಲ್ಲಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಚುನಾವಣಾ ಕಾರ್ಯಾಲಯದ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ.

ಈ ಸಂದರ್ಭದಲ್ಲಿ ಬಿಜೆಪಿ ನಿಕಟಪೂರ್ವ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ದಕ್ಷಿಣ ಮಂಡಲ ಅಧ್ಯಕ್ಷ ಆನಂದರಾವ್ ಶಿಂಧೆ, ಪಕ್ಷದ ಮುಖಂಡರು, ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ದಕ್ಷಿಣ ಮಂಡಲ ಪ್ರಧಾನ ಕಾರ್ಯದರ್ಶಿ ರಾಜು ನೀಲಗುಂದ್ ತಿಳಿಸಿದ್ದಾರೆ.

## ಜಿಲ್ಲೆಯಲ್ಲಿ ಒಟ್ಟು 66 ನಾಮಪತ್ರಗಳು ಸಲ್ಲಿಕೆ

ದಾವಣಗೆರೆ,ಏ.18- ವಿಧಾನಸಭಾ ಸಾರ್ವತ್ರಿಕ ಚುನಾವಣೆ ನಡೆಯುತ್ತಿದ್ದು ದಾವಣಗೆರೆ ಜಿಲ್ಲೆಯ 7 ಕ್ಷೇತ್ರಗಳಲ್ಲಿ ನಾಮಪತ್ರಗಳಲ್ಲಿ ಏಪ್ರಿಲ್ 18 ರವರೆಗೆ 66 ನಾಮಪತ್ರಗಳು ಸಲ್ಲಿಕೆಯಾಗಿವೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ಮಂಗಳವಾರ ಜಗಳೂರು ಪಟ್ಟಣ ಪಂಚಾಯ್ತಿ ಮೀಸಲು ಕ್ಷೇತ್ರದಿಂದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಭ್ಯರ್ಥಿ ಬಿ .ದೇವೇಂದ್ರಪ್ಪ ಹಾಗೂ ಪಕ್ಷೇತರವಾಗಿ ಹೆಚ್.ಪಿ.ರಾಜೇಶ್ ಸೇರಿ ಇದುವರೆಗೆ 5 ನಾಮಪತ್ರಗಳು ಸಲ್ಲಿಕೆಯಾಗಿವೆ.

ಹರಿಹರ ಸಾಮಾನ್ಯ ಕ್ಷೇತ್ರದಲ್ಲಿ ಬಿಜೆಪಿಯ ಬಿ.ಪಿ. ಹರೀಶ್ 2 ನಾಮಪತ್ರ, ಉತ್ತಮ ಪ್ರಜಾಕೀಯ ಪಾರ್ಟಿಯಿಂದ ಕೃಷ್ಣ ಎಂ. ಒಟ್ಟು 5 ನಾಮಪತ್ರಗಳು ಸಲ್ಲಿಕೆಯಾಗಿವೆ.

ದಾವಣಗೆರೆ ಉತ್ತರ ಸಾಮಾನ್ಯ ಕ್ಷೇತ್ರದಿಂದ ಕೆ.ಜಿ. ಅಜ್ಜಪ್ಪ ಪಕ್ಷೇತರ, ಚಂದ್ರಶೇಖರ.ಬಿ ಉತ್ತಮ ಪ್ರಜಾಕೀಯ ಪಕ್ಷ, ಶ್ರೀಧರ್ ಪಾಟೀಲ್.ಸಿ ಆಮ್ ಆದ್ಮಿ ಪಕ್ಷದಿಂದ ನಾಮಪತ್ರ ಸಲ್ಲಿಸಿದ್ದು, ಇದುವರೆಗೆ 13 ನಾಮಪತ್ರಗಳು ಸಲ್ಲಿಕೆಯಾಗಿವೆ. ದಾವಣಗೆರೆ ದಕ್ಷಿಣ ಸಾಮಾನ್ಯ ಕ್ಷೇತ್ರದಲ್ಲಿ ಬಿ.ನಾಗೇಂದ್ರರಾವ್, ಈರಣ್ಣ, ನೌಶೀನ್ ತಾಜ್ ಇವರುಗಳು ಪಕ್ಷೇತರರಾಗಿ, ಈಶ್ವರ ಉತ್ತಮ ಪ್ರಜಾಕೀಯ ಪಕ್ಷದಿಂದ, ಭಾರತಿ.ಕೆ ಸೋಷಿಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ ಕಮ್ಯುನಿಷ್ಟ್ ಪಕ್ಷ, ಹೆಚ್.ಕೆ.ದಾವಲ್ ಸಾಬ್ ಕರ್ನಾಟಕ ರಾಷ್ಟ್ರ ಸಮಿತಿಯಿಂದ ನಾಮಪತ್ರ ಸಲ್ಲಿಸಿದ್ದು, ಇಲ್ಲಿವರೆಗೆ 13 ನಾಮಪತ್ರಗಳು ಸಲ್ಲಿಕೆಯಾಗಿವೆ.

ಮಾಯಕೊಂಡ ಎಸ್.ಸಿ ಮೀಸಲು ಕ್ಷೇತ್ರಕ್ಕೆ ಬಿಜೆಪಿಯಿಂದ ಎಂ.ಬಸವರಾಜನಾಯ್ಕ, ಲೋಕೇಶ್ ಪಿ.ಡಿ ಪಕ್ಷೇತರ ಹಾಗೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನಿಂದ ಕೆ.ಎಸ್.ಬಸವರಾಜ್ ಸೇರಿದಂತೆ ಇಲ್ಲಿಯವರೆಗೆ 15 ನಾಮಪತ್ರಗಳು ಸಲ್ಲಿಕೆಯಾಗಿವೆ.

ಚನ್ನಗಿರಿ ಸಾಮಾನ್ಯ ಕ್ಷೇತ್ರದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ ಬಸವರಾಜು ವಿ. ಶಿವಗಂಗಾ, ಚಂದ್ರಶೇಖರ.ಹೆಚ್ ಉತ್ತಮ ಪ್ರಜಾಕೀಯ ಪಾರ್ಟಿ, ಕುಬೇಂದ್ರಸ್ವಾಮಿ ಪಕ್ಷೇತರ, ಎಂ.ರೂಪ ಕಲ್ಯಾಣ ರಾಜ್ಯ ಪ್ರಗತಿ ಪಕ್ಷ, ಹೆಚ್.ಆರ್.ಹರೀಶ್ ಪಕ್ಷೇತರ ಸೇರಿ ಇದುವರೆಗೆ 9 ನಾಮಪತ್ರಗಳು ಸಲ್ಲಿಕೆಯಾಗಿವೆ.

ಹೊನ್ನಾಳಿ ಸಾಮಾನ್ಯ ಕ್ಷೇತ್ರಕ್ಕೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಿಂದ ಡಿ.ಜಿ.ಶಾಂತನಗೌಡ, ಉತ್ತಮ ಪ್ರಜಾಕೀಯ ಪಾರ್ಟಿಯಿಂದ ಕಿರಣ್ ಎಲ್. ಎಸ್, ಡಿ.ಚಂದ್ರಶೇಖರಪ್ಪ ಪಕ್ಷೇತರ ಸೇರಿ ಇದುವರೆಗೆ 6 ನಾಮಪತ್ರಗಳು ಸಲ್ಲಿಕೆಯಾಗಿವೆ.

# ಬಿಜೆಪಿ ಅಭ್ಯರ್ಥಿ ಹರೀಶ್ ನಾಮಪತ್ರ ಸಲ್ಲಿಕೆ



**ಹರಿಹರ**

ಹರಿಹರ, ಏ.18- ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಪಿ. ಹರೀಶ್ ಅವರು, ಸಂಸದ ಜಿ. ಎಂ.ಸಿದ್ದೇಶ್ವರ ಸೇರಿದಂತೆ, ಪಕ್ಷದ ಮುಖಂಡರು, ಕಾರ್ಯಕರ್ತರು ಮತ್ತು ಅಪಾರ ಅಭಿಮಾನಿಗಳೊಂದಿಗೆ ಬೃಹತ್ ಮೆರವಣಿಗೆ ಮೂಲಕ ತೆರಳಿ ಚುನಾವಣಾ ಧಿಕಾರಿಗೆ ನಾಮಪತ್ರ ಸಲ್ಲಿಸಿದರು.

ಬೆಳಿಗ್ಗೆ ಬೂದಿಹಾಳ್ ಗ್ರಾಮಕ್ಕೆ ಭೇಟಿ ಕೊಟ್ಟು ಗೋ ಮಾತೆಗೆ ಪೂಜೆ ಸಲ್ಲಿಸಿ, ದೇವಸ್ಥಾನ ದಲ್ಲಿ ಹಮ್ಮಿಕೊಂಡಿದ್ದ ವಿಶೇಷ ಅಭಿಷೇಕ ಹಾಗೂ ಪೂಜಾ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ನಂತರ ಮೆರವಣಿಗೆ ನೀರಾವರಿ ಇಲಾಖೆಯಿಂದ ಪ್ರಾರಂಭಗೊಂಡು ಶಿವಮೊಗ್ಗ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಮುಖ್ಯರಸ್ತೆಯಲ್ಲಿ ಸಾಗಿ ತಹಶೀಲ್ದಾರ್ ಕಚೇರಿಗೆ ಅಂತ್ಯಗೊಂಡಿತು. ಡ್ರಮ್ ಸೆಟ್, ಸೌಂಡ್ ಸಿಸ್ಟಮ್, ಡೊಳ್ಳು ಸೇರಿದಂತೆ ವಿವಿಧ ಕಲಾ ತಂಡಗಳು ಭಾಗವಹಿಸಿ ಮೆರವಣಿಗೆಗೆ ಮೆರಗನ್ನು ನೀಡಿದವು.

ನಾಮಪತ್ರ ಸಲ್ಲಿಸಿದ ನಂತರ ಪತ್ರಕರ್ತ ರೊಂದಿಗೆ ಮಾತನಾಡಿದ ಹರೀಶ್, ದೇಶದ ಪ್ರಧಾನಿ ನರೇಂದ್ರ ಮೋದಿ, ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ, ಸಿಎಂ ಬಸವರಾಜ ಬೊಮ್ಮಾಯಿಯವರು ಜನರ ಒಳಿತಿಗಾಗಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಮೂಲಕ ಜನರಿಗೆ ಯಾವುದೇ ರೀತಿಯ ಆರ್ಥಿಕ ತೊಂದರೆ ಆಗದಂತೆ ಸುಭದ್ರ ಆಡಳಿತ ನೀಡಿದ್ದಾರೆ. ಇದರಿಂದಾಗಿ ಈ ಬಾರಿ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ನನ್ನನ್ನು ಅಧಿಕ ಮತಗಳ ಅಂತರದಿಂದ ಗೆಲ್ಲಿಸುತ್ತಾರೆ ಎಂಬ ವಿಶ್ವಾಸ ಹೊಂದಿರುವುದಾಗಿ ತಿಳಿಸಿದರು.

ನಾನು ಕೂಡ ಹಿಂದೆ ಶಾಸಕನಾಗಿದ್ದ ಅವಧಿಯಲ್ಲಿ ಸೇತುವೆ ನಿರ್ಮಾಣ, ಕೋರ್ಟ್, ಡಿಗ್ರಿ ಕಾಲೇಜು, ತಾಲ್ಲೂಕು ಕಚೇರಿ ಸೇರಿದಂತೆ ಹಲವು ಬಗೆಯ ಅಭಿವೃದ್ಧಿ ಕಾರ್ಯಗಳನ್ನು ಕ್ಷೇತ್ರದಲ್ಲಿ ಮಾಡಿದ್ದು, ಅದು ಜನರ ಮನಸ್ಸಿನಲ್ಲಿ ಇರುವುದರಿಂದ ನಾನು ಗೆಲ್ಲುವುದು ನಿಶ್ಚಿತ ಮತ್ತು ರಾಜ್ಯದಲ್ಲಿ ಕೂಡ ಬಿಜೆಪಿ ಪಕ್ಷ ಮತ್ತೊಮ್ಮೆ ಬಹುಮತದೊಂದಿಗೆ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಹೇಳಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ದಾವಣಗೆರೆ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲಿ ಈ ಬಾರಿ ಬಿಜೆಪಿ ಅಭ್ಯರ್ಥಿಗಳು ಭಾರೀ ಬಹುಮತದೊಂದಿಗೆ ಗೆಲ್ಲುತ್ತಾರೆ. ಜೊತೆಗೆ ಹರಪನಹಳ್ಳಿಯಲ್ಲಿ ಕೂಡ ಬಿಜೆಪಿ ಅಭ್ಯರ್ಥಿ ಬಹುಮತದೊಂದಿಗೆ ಗೆಲ್ಲುವ ವಿಶ್ವಾಸ ಇದ್ದು, ನಮ್ಮಲ್ಲಿ ಯಾವುದೇ ರೀತಿಯ ಬಂಡಾಯದ ಮಾತಿಲ್ಲ.

ಎಲ್ಲರೂ ಒಗ್ಗಟ್ಟಿನಿಂದ ಬಿಜೆಪಿ ಪಕ್ಷವನ್ನು ಅಧಿಕಾರಕ್ಕೆ ತರುತ್ತಾರೆ. ಮಾಯಕೊಂಡ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರವನ್ನು ಸಲ್ಲಿಸಿರುವ ಜಿಪಂ ಮಾಜಿ ಸದಸ್ಯ ವಾಗೀಶ್ ಸ್ವಾಮಿ ಬಗ್ಗೆ ನನಗೆ ಏನೂ ಗೊತ್ತಿಲ್ಲ, ಅವರು ಪಕ್ಷೇತರರಾಗಿ ಸ್ಪರ್ಧಿಸಿದ್ದರೆ ಮಾತನಾಡಿ ಸರಿಪಡಿಸಲು ಮುಂದಾಗುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಉಸ್ತುವಾರಿ ಜೀವನಮೂರ್ತಿ, ಹಿರಿಯ ಮುಖಂಡರಾದ ಎನ್. ಜಿ. ನಾಗನಗೌಡ್ರು, ಚಂದ್ರಶೇಖರ್ ಪೂಜಾರ್, ನಗರಸಭೆ ಸದಸ್ಯರಾದ ಎ.ಬಿ. ವಿಜಯಕುಮಾರ್, ಅಶ್ವಿನಿ ಕೃಷ್ಣ, ಹನುಮಂತಪ್ಪ ಇತರರು ಹಾಜರಿದ್ದರು.


ಡಾ. ಬಿ.ಆರ್. ಅಂಬೇಡ್ಕರ್‌ರವರ ಜಯಂತಿಯ ಶುಭಾಶಯಗಳು

From the house of
ಬಚ್ಪನ್
ಪ್ಲೇ ಸ್ಕೂಲ್

ALUR EDUCATIONAL TRUST
1200+ School Nationwide

From the house of
BACHPAN
play school

ಆಲೂರ್ ಎಜುಕೇಶನಲ್ ಟ್ರಸ್ಟ್ (ರಿ.)

ADMISSION OPEN
for 2023-24

ACADEMIC HEIGHTS PUBLIC SCHOOL
We Teach Life...

PLAY GROUP | NURSERY | LKG | UKG | 1st to 7th
ENGLISH MEDIUM

ಪ್ರವೇಶ ಪ್ರಾರಂಭವಾಗಿದೆ
ಆಕಾಡೆಮಿಕ್ ಹೈಟ್ಸ್ ಪಬ್ಲಿಕ್ ಸ್ಕೂಲ್
ಆಂಗ್ಲ ಮಾಧ್ಯಮ



#13, G.M. PLAZA, A.V.K. COLLEGE ROAD, P.J.EXTN., DAVANGERE-02
#1067/4, NEAR 1ST BUS STOP, BEHAIND CANARA BANK, VIDYANAGAR, DAVANGERE-05
9901956081
9901956082


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte